ಪ್ರೊ. ಎ. ಎಸ್. ಧರಣೇಂದ್ರಯ್ಯ

ಮಲ್ಲಿಕಾರ್ಜುನ ಗೌಡ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರೊ. ಎ. ಎನ್. ಮೂರ್ತಿರಾವ್

ಮಲ್ಲಿಕಾರ್ಜುನ ಗೌಡ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

Prof. A. N. Murthy Rao : By Mallikarjuna Gowda, Published by Dr.Karigowda Beechanahalli, Director, prasaranga, Kannada University, Hampi, Vidyaranya, Kamalalpura 583221, PP : VIII + 30 Rs. 10/-

First edition 1995.

ನಮ್ಮವರು ಪುಸ್ತಕ ಮಾಲೆ ೯

ಪ್ರಕಾಶಕರು

ಡಾ. ಕರೀಗೌಡ ಬೀಚನಹಳ್ಳಿ

ನಿರ್ದೇಶಕರು, ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಕಮಲಾಪುರ-೫೮೩ ೨೨೧.

ಬೆಲೆ : ಹತ್ತು ರೂಪಾಯಿಗಳು

ಮುದ್ರಕರು

ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್

8/2, ಮಾರೇನಹಳ್ಳಿ, ಮೊದಲ ಅಡ್ಡ ರಸ್ತೆ,

23ನೇ ಮುಖ್ಯ ರಸ್ತೆ, ಬೆಂಗಳೂರು - 560 078

ದೂರವಾಣಿ : 642102

ನಿವೇದನೆ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ನಮ್ಮ ದೇಶದಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ, ಅಲ್ಲದೇ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ, ಬೆಳಕನ್ನು ಉಂಟು ಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರವಿಧಾನಗಳ ನಿರ್ಮಾಣ. ಈ ಬಗೆಯ ಶಾಸ್ತ್ರ-ಕಲೆ, ಅಭಿಜಾತ- ಜಾನಪದ, ಮಾರ್ಗ-ದೇಸಿ, ಸ್ವಕೀಯ-ಪರಕೀಯ, ಪೌರ್ವಾತ್ಯ-ಪಾಶ್ಚಾತ್ಯ ಈ ಬಗೆ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ. ಭಾಷೆಯಲ್ಲಿ ಮೂಡಿ ಬರುವ ತಿಳುವಳಿಕೆ ಮಾತ್ರ ಉಪಯುಕ್ತವಾಗಬಲ್ಲದು. ಅನುವಾದ, ಭಾಷಾಂತರ, ವಿವರಣೆ, ಟೀಕೆ, ವಿಮರ್ಶೆ ಇಂಥ ವಿಧಾನಗಳನ್ನು ಅನುಸರಿಸುತ್ತ ತಿಳುವಳಿಕೆಯ ಹೊಸ ಸಾಹಿತ್ಯ ನಿರ್ಮಾಣವಾಗಬೇಕು. ಅಂಥ ಎಲ್ಲ ಬಗೆಯ ಸಂಶೋಧನಕ್ಕೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಅನುಕೂಲವಿದೆ, ಅವಕಾಶವೂ ಇದೆ.

ಹೀಗೆ ಮೂಡಿ ಬಂದ ಸಾಹಿತ್ಯ ಪ್ರಕಟವಾಗಬೇಕು. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಂಥ ಗುರುತರವಾದ ಜವಾಬ್ದಾರಿಯಿದೆ. ವಿದ್ಯೆಯ ಸೃಷ್ಟಿಯಾಗುವುದು ಈ ಪ್ರಸಾರಾಂಗದಲ್ಲಿ. ನಾಡಿನ ತಜ್ಞರಿಂದ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಸೃಷ್ಟಿಸುತ್ತಿರುವ ಸಾಹಿತ್ಯವನ್ನೂ ಅದು ಪ್ರಕಟಿಸಬೇಕು. ಇದು ತಿಳುವಳಿಕೆಗೆ ಪರಿಪ್ರೇಕ್ಷ್ಯವನ್ನು ಕಟ್ಟುವ ಕೆಲಸ. ನಾಡಿನ ಪ್ರಕೃತಿಯಂತೆ ನಾಡಿನ ಸಂಸ್ಕೃತಿ ಕೂಡ ಈ ಪರಿಪ್ರೇಕ್ಷ್ಯವಿಲ್ಲದೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಕಲ್ಲಿನಲ್ಲಿರುವ ಶಾಸನಗಳನ್ನು ಕಣ್ಣೆತ್ತಿ ನೋಡದ ಜನ ಅದೇ ಪುಸ್ತಕದಲ್ಲಿ ಪ್ರಕಟಗೊಂಡರೆ ಓದುತ್ತಾರೆ, ಅರ್ಥ ಮಾಡಿಕೊಳ್ಳುತ್ತಾರೆ. ಜನರಾಡುವ ಶಬ್ದಗಳನ್ನೇ ಕೋಶದಲ್ಲಿ ಸಂಗ್ರಹಿಸಿದರೆ ಆ ಶಬ್ದಗಳಿಗೆ ತಿಳುವಳಿಕೆಯ ಬೆಲೆ ಬರುತ್ತದೆ.

ನಮ್ಮ ಪ್ರಸಾರಾಂಗ, ಈಗಾಗಲೇ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಸಾರಾಂಗ, ತನ್ನ ಪ್ರಕಟಣೆಗಳ ಮೂಲಕ ಸಾರ್ಥಕವಾಗಬೇಕಾದ ದಾರಿಯನ್ನು ಹುಡುಕಿಕೊಳ್ಳುತ್ತಿದೆ. ಲೋಕದಲ್ಲಿಯ ತಿಳುವಳಿಕೆಯನ್ನು ಸಂಗ್ರಹಿಸಿ ತಿರುಗಿ ಲೋಕಕ್ಕೇ ದಾನ ಮಾಡುವ ಪ್ರಕ್ರಿಯೆ ಪ್ರಸಾರಾಂಗದಲ್ಲಿ ನಡೆಯುತ್ತಿದೆ. ಸಂಗ್ರಹವಾದ ತಿಳುವಳಿಕೆಗೆ ಗ್ರಂಥಗಳ ರೂಪವನ್ನು ಕೊಡುವ ಹೊಣೆಗಾರಿಕೆ ಪ್ರಸಾರಾಂಗದ್ದಾಗಿದೆ. ಈ ರೂಪಾಂತರದ ಪ್ರಕ್ರಿಯೆ ನಮ್ಮ ವಿಶ್ವವಿದ್ಯಾಲಯದ ವೈಶಿಷ್ಟ್ಯವಾಗಿದೆ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಯಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು, ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪವೆಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಕಿರುಪುಸ್ತಿಕೆಗಳ ರೂಪದಲ್ಲಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪರಿವಿಡಿ

ಪ್ರೊ. ಎ. ಎನ್. ಮೂರ್ತಿರಾವ್

ಪ್ರೊ. ಎ. ಎನ್. ಮೂರ್ತಿರಾವ್

ಮೂರ್ತಿರಾಯರು ಹುಟ್ಟಿದ್ದು ೧೬ ಜೂನ್ ೧೯೦೦ರಲ್ಲಿ. ಭಾರತ ವಸಾಹತುಶಾಹಿಯ ಹಿಡಿತಕ್ಕೆ ಸಿಲುಕಿ ತನ್ನದೇ ಆದ ಅಂತಃಸತ್ವದ ಹುಡುಕಾಟದಲ್ಲಿದ್ದಾಗ, ಮೂರ್ತಿರಾಯರು ಬಾಲ್ಯ, ಯೌವನ, ಮಧುವಯಸ್ಸುಗಳನ್ನು ವಸಾಹತುಶಾಹಿಯ ಈ ವಾತಾವರಣದಲ್ಲಿಯೇ ಕಳೆದವರು. ರಾಷ್ಟ್ರೀಯತಾವಾದಿಗಳ ಅತಿರೇಕವಾಗಲಿ, ಪಶ್ಚಿಮದ ಆಧುನಿಕತೆಯ ಅಹಂ ಆಗಲಿ ಅವರನ್ನು ಅತಿಕ್ರಮಿಸಿಕೊಳ್ಳಲಿಲ್ಲ. ಹೀಗಾಗಿ ಮೂರ್ತಿರಾಯರು ಇಡೀ ಒಂದು ಶತಮಾನವನ್ನು ಕಾಣುವ ಮತ್ತು ಅದರ ಆಗು ಹೋಗುಗಳನ್ನು ಅರ್ಥೈಸುವ ರೀತಿ ಬೇರೆ ಲೇಖಕರಿಗಿಂತ ಭಿನ್ನವಾಗಿರುವುದಲ್ಲದೆ ನಿರ್ಲಿಪ್ತ ಗುಣ ಪಡೆದುಕೊಂಡಿದೆ. ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ ಇವರು ಭಾರತದ ಸ್ವಾತಂತ್ರ್ಯ ಪೂರ್ವದ ಹಳ್ಳಿಯೊಂದರ ಬದಲಾವಣೆಯ ವಿಕಾಸಗತಿಯಲ್ಲಿ ತಮ್ಮ ಬಾಲ್ಯವನ್ನು ಕಳೆದದ್ದು, ನಂತರ ಇಂಗ್ಲಿಷ್ ವಿದ್ಯಾಭ್ಯಾಸ, ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಪದವಿ ಪಡೆದದ್ದು, ಇವು ಅವರ ಜೀವನದೃಷ್ಟಿ ಮತ್ತು ಬರವಣಿಗೆಯ ಮೇಲೆ ಪರಿಣಾಮ ಬೀರಿದ ಸಂಗತಿಗಳಾಗಿವೆ.

ಕನ್ನಡದಲ್ಲಿ 'ಪ್ರಬಂಧ' ಪ್ರಕಾರವನ್ನು ಯಶಸ್ವಿಯಾಗಿ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡ ಮೂರ್ತಿರಾಯರ ಜೀವನ ಪಾಶ್ಚಾತ್ಯ ಜೀವನ ಶೈಲಿಯ ಕಡೆಗೆ ಹೆಚ್ಚಿನ ಒಲವು ಮತ್ತು ಅದೇ ಜೀವನ ಕ್ರಮಕ್ಕೆ ಸಂವಾದಿಯಾದುದಾಗಿದೆ. ಕೈಗಾರಿಕೀಕರಣದ ಜೊತೆಜೊತೆಗೆ ವಸ್ತುವೈವಿಧ್ಯ ಮತ್ತು ಬಾಹುಳ್ಯತೆಯನ್ನು ಪಡೆದ ಪಾಶ್ಚಾತ್ಯ ಪ್ರಬಂಧ ಪ್ರಕಾರವು ಆಧುನಿಕ ಜೀವನ ಕ್ರಮದೊಂದಿಗೆ ಸಾವಯವ ಸಂಬಂಧವನ್ನು ಪಡೆದುದಾಗಿತ್ತು. ಮೂರ್ತಿರಾಯರ ಯಶಸ್ಸು ಕೂಡ ಆಧುನಿಕ ಜೀವನ ಕ್ರಮವನ್ನು ಗ್ರಹಿಸುವ ಮತ್ತದನ್ನು ಹಳೆಯದರೊಂದಿಗೆ ಅರ್ಥಪೂರ್ಣ ಸಂಬಂಧ ಕಲ್ಪಿಸಿ ವರ್ತಮಾನದಲ್ಲಿ ವಿಸ್ತರಿಸಿಕೊಳ್ಳುವ ನೆಲೆಯನ್ನವಲಂಬಿಸಿದುದನ್ನು ಗಮನಿಸ ಬಹುದಾಗಿದೆ.

ಮೂರ್ತಿರಾಯರ ಜೀವನ ದೃಷ್ಟಿಯನ್ನು ಪರಿಶೀಲಿಸಬಹುದಾದಲ್ಲಿ ಅವರ ಜೀವನವಿಧಾನ, ಅವರ ಸಾಮಾಜಿಕ ಸ್ತರ, ಸ್ನೇಹಿತರು, ಬಂಧುಗಳನ್ನು ಗಮನಿಸಬೇಕಾಗುತ್ತದೆ. ಲೇಖಕರು ಅಕ್ಕಿಹೆಬ್ಬಾಳಿನಂತಹ ಚಿಕ್ಕಹಳ್ಳಿಯಲ್ಲಿ ಭಾರತೀಯ ವರ್ಣ ವ್ಯವಸ್ಥೆಯ ಮೇಲಸ್ತರದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಅವರ ಈ

ಪ್ರೊ. ಎ. ಎನ್. ಮೂರ್ತಿರಾವ್

ಮೂರ್ತಿರಾಯರು ಹುಟ್ಟಿದ್ದು ೧೬ ಜೂನ್ ೧೯೦೦ರಲ್ಲಿ. ಭಾರತ ವಸಾಹತುಶಾಹಿಯ ಹಿಡಿತಕ್ಕೆ ಸಿಲುಕಿ ತನ್ನದೇ ಆದ ಅಂತಃಸತ್ವದ ಹುಡುಕಾಟದಲ್ಲಿದ್ದಾಗ, ಮೂರ್ತಿರಾಯರು ಬಾಲ್ಯ, ಯೌವನ, ಮಧುವಯಸ್ಸುಗಳನ್ನು ವಸಾಹತುಶಾಹಿಯ ಈ ವಾತಾವರಣದಲ್ಲಿಯೇ ಕಳೆದವರು. ರಾಷ್ಟ್ರೀಯತಾವಾದಿಗಳ ಅತಿರೇಕವಾಗಲಿ, ಪಶ್ಚಿಮದ ಆಧುನಿಕತೆಯ ಅಹಂ ಆಗಲಿ ಅವರನ್ನು ಅತಿಕ್ರಮಿಸಿಕೊಳ್ಳಲಿಲ್ಲ. ಹೀಗಾಗಿ ಮೂರ್ತಿರಾಯರು ಇಡೀ ಒಂದು ಶತಮಾನವನ್ನು ಕಾಣುವ ಮತ್ತು ಅದರ ಆಗು ಹೋಗುಗಳನ್ನು ಅರ್ಥೈಸುವ ರೀತಿ ಬೇರೆ ಲೇಖಕರಿಗಿಂತ ಭಿನ್ನವಾಗಿರುವುದಲ್ಲದೆ ನಿರ್ಲಿಪ್ತ ಗುಣ ಪಡೆದುಕೊಂಡಿದೆ. ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ ಇವರು ಭಾರತದ ಸ್ವಾತಂತ್ರ್ಯ ಪೂರ್ವದ ಹಳ್ಳಿಯೊಂದರ ಬದಲಾವಣೆಯ ವಿಕಾಸಗತಿಯಲ್ಲಿ ತಮ್ಮ ಬಾಲ್ಯವನ್ನು ಕಳೆದದ್ದು, ನಂತರ ಇಂಗ್ಲಿಷ್ ವಿದ್ಯಾಭ್ಯಾಸ, ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಪದವಿ ಪಡೆದದ್ದು, ಇವು ಅವರ ಜೀವನದೃಷ್ಟಿ ಮತ್ತು ಬರವಣಿಗೆಯ ಮೇಲೆ ಪರಿಣಾಮ ಬೀರಿದ ಸಂಗತಿಗಳಾಗಿವೆ.

ಕನ್ನಡದಲ್ಲಿ 'ಪ್ರಬಂಧ' ಪ್ರಕಾರವನ್ನು ಯಶಸ್ವಿಯಾಗಿ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡ ಮೂರ್ತಿರಾಯರ ಜೀವನ ಪಾಶ್ಚಾತ್ಯ ಜೀವನ ಶೈಲಿಯ ಕಡೆಗೆ ಹೆಚ್ಚಿನ ಒಲವು ಮತ್ತು ಅದೇ ಜೀವನ ಕ್ರಮಕ್ಕೆ ಸಂವಾದಿಯಾದುದಾಗಿದೆ. ಕೈಗಾರಿಕೀಕರಣದ ಜೊತೆಜೊತೆಗೆ ವಸ್ತುವೈವಿಧ್ಯ ಮತ್ತು ಬಾಹುಳ್ಯತೆಯನ್ನು ಪಡೆದ ಪಾಶ್ಚಾತ್ಯ ಪ್ರಬಂಧ ಪ್ರಕಾರವು ಆಧುನಿಕ ಜೀವನ ಕ್ರಮದೊಂದಿಗೆ ಸಾವಯವ ಸಂಬಂಧವನ್ನು ಪಡೆದುದಾಗಿತ್ತು. ಮೂರ್ತಿರಾಯರ ಯಶಸ್ಸು ಕೂಡ ಆಧುನಿಕ ಜೀವನ ಕ್ರಮವನ್ನು ಗ್ರಹಿಸುವ ಮತ್ತದನ್ನು ಹಳೆಯದರೊಂದಿಗೆ ಅರ್ಥಪೂರ್ಣ ಸಂಬಂಧ ಕಲ್ಪಿಸಿ ವರ್ತಮಾನದಲ್ಲಿ ವಿಸ್ತರಿಸಿಕೊಳ್ಳುವ ನೆಲೆಯನ್ನವಲಂಬಿಸಿದುದನ್ನು ಗಮನಿಸ ಬಹುದಾಗಿದೆ.

ಮೂರ್ತಿರಾಯರ ಜೀವನ ದೃಷ್ಟಿಯನ್ನು ಪರಿಶೀಲಿಸಬಹುದಾದಲ್ಲಿ ಅವರ ಜೀವನವಿಧಾನ, ಅವರ ಸಾಮಾಜಿಕ ಸ್ತರ, ಸ್ನೇಹಿತರು, ಬಂಧುಗಳನ್ನು ಗಮನಿಸಬೇಕಾಗುತ್ತದೆ. ಲೇಖಕರು ಅಕ್ಕಿಹೆಬ್ಬಾಳಿನಂತಹ ಚಿಕ್ಕಹಳ್ಳಿಯಲ್ಲಿ ಭಾರತೀಯ ವರ್ಣ ವ್ಯವಸ್ಥೆಯ ಮೇಲಸ್ತರದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಅವರ ಈ

ಅನುಭವಗಳು ಮತ್ತವುಗಳ ಸಂಶ್ಲೇಷಣೆಯಲ್ಲಿ ಹುಟ್ಟಬಹುದಾದ ಅರ್ಥವಂತಿಕೆಯು ಇತರೆ ಸಮಕಾಲೀನ ಲೇಖಕರಿಗಿಂತ ಬೇರೆಯ ಬಗೆಯದಾಗಿತ್ತು. ಅವರು ತಮ್ಮ ಆತ್ಮಕಥೆಯಲ್ಲಿ ವಿವರಿಸುವಂತೆ "ನನ್ನ ೮೬ ವರ್ಷದಲ್ಲಿ ಎಂದೂ ಅಕ್ಕಿಹೆಬ್ಬಾಳಿನಲ್ಲಿ ದರೋಡೆಯಾಗಲಿ ಅತ್ಯಾಚಾರವಾಗಲಿ ಕೊಲೆಯಾಗಲಿ ನಡೆಯಿತೆಂದು ಕೇಳಿಲ್ಲ. ಯಾರೊಬ್ಬರಾಗಲಿ ಮತ್ತೊಬ್ಬರ ಮೇಲೆ ಚೂರಿ ಹಿಡಿದು ಹಲ್ಲೆ ನಡೆಸಿಲ್ಲ. ಮಾನವ ಸಹಜವಾದ ಮನೋದೌರ್ಬಲ್ಯಗಳಿದ್ದರೂ ಅವು ನಮ್ಮೂರಿನವರನ್ನು ಕ್ರೌರ್ಯಕ್ಕೆ ಎಳೆಯಲಿಲ್ಲ: ಅಸಮಾಧಾನ ದ್ವೇಷದಲ್ಲಿ ಪರ್ಯವಸಾನವಾಗದೆ ಹಾಗೇ ಮರೆತು ಹೋಗುತ್ತಿತ್ತು" (ಸಂಜೆಗಣ್ಣಿನ ಹಿನ್ನೋಟ, ಪು: ೩೪). ಹೀಗೆ ವಿವರಿಸುವ ಲೇಖಕರ ಅನುಭವ ಇಂಡಿಯಾದ ಸಾಮಾಜಿಕ ಅವಸ್ಥಾಂತರಗಳ ಘಟ್ಟದ ಒಂದು ನೆಲೆಯ ಅದರಲ್ಲೂ ಮೇಲುವರ್ಗದ ಜೀವನ ನೆಲೆಯಿಂದ ಹುಟ್ಟಿಕೊಂಡದುದಾಗಿದೆ. ಇದೇ ಪರಿಮಿತಿಯ ಸಮಕಾಲೀನ ವೈರುಧ್ಯಗಳು, ಸಂಘರ್ಷಮಯ ವ್ಯವಸ್ಥೆಯ (ಉದಾ-ಸ್ವಾತಂತ್ರ್ಯ ಚಳುವಳಿಯಂತಹ) ಗಾಢ ಪರಿಣಾಮಕ್ಕೊಳಗಾಗದಿರುವುದರಲ್ಲಿಯೂ ಕಂಡುಬರುತ್ತದೆ. ಇದನ್ನೆಲ್ಲ ಪ್ರಾಮಾಣಿಕವಾಗಿ ಒಪ್ಪಿಕೊಂಡು ಅಭಿವ್ಯಕ್ತಿಯ ನೆಲೆಗಳನ್ನು ಕಂಡುಕೊಂಡುದ್ದು ಅವರ ವೈಶಿಷ್ಟ್ಯವಾಗಿದೆ. ಇವರೊಂದಿಗೆ ಗೊರೂರರನ್ನು ಗಮನಿಸಿದಾಗ ವ್ಯವಸ್ಥೆಯ ಒಳವಿವರಗಳನ್ನು ಕಾಣುವ ಮತ್ತು ಅರ್ಥೈಸುವ ಬಗೆ ಪರಸ್ಪರರಲ್ಲಿ ಭಿನ್ನವಾಗಿರುವುದನ್ನು ಗುರುತಿಸಬಹುದು. ಮೂರ್ತಿರಾಯರು ಕಥೆ, ಕಾದಂಬರಿ, ಕವಿತೆಗಳಂತಹ ಪ್ರಕಾರಗಳನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆಯ್ದುಕೊಳ್ಳದೆ 'ಪ್ರಬಂಧ' ಪ್ರಕಾರವೊಂದನ್ನೇ ಆಯ್ದುಕೊಂಡುದು ಸಹ ಅವರ ಈ ಪರಿಮಿತಿಯನ್ನು ಸೂಚಿಸುತ್ತದೆಯೆನ್ನಬಹುದು.

'ಸಂಜೆಗಣ್ಣಿನ ಹಿನ್ನೋಟ'ದಲ್ಲಿ ಸ್ಪಷ್ಟಪಡಿಸುವಂತೆ "ರಂಗಯ್ಯ ನನ್ನಿಂದ 'ಅರೇಬಿಯನ್ ನೈಟ್ಸ್' ಪುಸ್ತಕವನ್ನು ಓದಿಸಿದ ದಿನದಿಂದ ಬದಲಾವಣೆ ಆರಂಭವಾಯಿತು ಎಂದು ಹೇಳಿಯೇನು. ಅದು ತೀವ್ರ ವೇಗದಿಂದ ಸಾಗಿದ್ದು ಮೈಸೂರಿನಲ್ಲಿ ಸಾರ್ವಜನಿಕ ಪುಸ್ತಕ ಭಂಡಾರ - ಪಬ್ಲಿಕ್ ಲೈಬ್ರರಿ ಆರಂಭವಾದ ದಿನದಿಂದ ಎನ್ನಬಹುದು. ಅಂದರೆ, ನನ್ನಲ್ಲಿ ಪರಿವರ್ತನೆ ಆರಂಭವಾದದ್ದಕ್ಕೆ ಮುಖ್ಯಕಾರಣ ಬದುಕಿನ ಅನುಭವವಲ್ಲ, ಪುಸ್ತಕಗಳು ಒದಗಿಸಿದ ಅನುಭವ; ಬಾಹ್ಯ ಪ್ರಪಂಚದಲ್ಲಿ ಹಳ್ಳಿಗೂ ಪಟ್ಟಣಕ್ಕೂ ಇದ್ದ ವ್ಯತ್ಯಾಸವಲ್ಲ. ಓದಿನ ಫಲವಾಗಿ ಮನಸ್ಸಿನಲ್ಲೊಂದು ಹೊಸ ಪ್ರಪಂಚ ಸೃಷ್ಟಿಯಾದದ್ದು. 'ಬದುಕಿಗೆ ಹೋಲಿಸಿದರೆ ಸಾಹಿತ್ಯ ರಕ್ತಹೀನ ಸತ್ವಹೀನ ವಸ್ತು, ಬದುಕಿನ ಕೆಲಸವನ್ನು ಅದು ಎಂದಿಗೂ ಮಾಡಲಾರದು" (ಪು.೧೩೨). ಈ ಮಾತುಗಳು ಮೂರ್ತಿರಾಯರು ಬದುಕನ್ನು ಮತ್ತು ಅದು ...ನಾವರಣಗೊಂಡ ಸಾಹಿತ್ಯವನ್ನು ಪರಿಭಾವಿಸಿದ ರೀತಿಯಾಗಿದೆ. ಈ ಬಗೆಯ ದೃಷ್ಟಿಯೇ ಅವರ ಬರಹಗಳಿಗೆ - ಪ್ರಬಂಧಗಳನ್ನು ಹೊರತುಪಡಿಸಿ - ವಿಚಾರಸಾಹಿತ್ಯದ ಗುಣ ಬರುವಂತೆ ಮಾಡಿದೆಯೆನ್ನಿಸುತ್ತದೆ. ತತ್ಕಾಲೀನ ವೈರುಧ್ಯಗಳಿಗೆ ಸಿಡಿಯುವ ಗುಣ, ಆವೇಶ, ಅತಿರೇಕಗಳಿಲ್ಲದೆ ಶಾಂತ, ನಿರ್ಲಿಪ್ತಗುಣಗಳೊಂದಿಗೆ ಬದುಕಿನ ಎಲ್ಲಾ ವಿಕೃತಗಳನ್ನು ಮೀರಿ ಆನಂದವನ್ನೇ ಅರಸುವ, ಕಾಣುವ ಮನೋಭಾವ ಮೂರ್ತಿರಾಯರ

ವ್ಯಕ್ತಿತ್ವದೊಂದಿಗೆ ಅವರ ಕೃತಿಗಳಲ್ಲಿಯೂ ಕಂಡುಬರುವ ಗುಣವಾಗಿದೆ. ಅವರೇ ಒಂದೆಡೆ ವಿವರಿಸುವಂತೆ 'ನನ್ನ ಪರಿಣತ ಬುದ್ಧಿಯ ಆಲೋಚನೆಗಳೆಲ್ಲ ನಿಜವಾಗಿ ಪುಸ್ತಕದ ಬದನೇಕಾಯಿ! ಯಾವ ಸಮಾಜದಲ್ಲಿ ನಾನು ಗಣನೆಗೆಬಾರದ ಅಂಶ ಮಾತ್ರನೋ ಆ ಸಮಾಜದ ಸಂಪ್ರದಾಯಗಳನ್ನು ಒಪ್ಪತ್ತಿನಲ್ಲಿ ಬದಲಾಯಿಸುವುದು ಸಾಧ್ಯವಲ್ಲ - ಇದನ್ನು ನಾನು ಮರೆತೆ' (ಸಂಜೆಗಣ್ಣಿನ ಹಿನ್ನೋಟ. ಪು.೨೩೫) ಎನ್ನುತ್ತಾರೆ.

ಹದಿಮೂರು ವರ್ಷಗಳ ಕಾಲೇಜಿನ ದಿನಗಳನ್ನು ತಮ್ಮ ಆತ್ಮಕಥೆಯಲ್ಲಿ ಬರೆಯುತ್ತ - ಇಡೀ ಕಾಮನ್‌ರೂಮು ಒಕ್ಕೊರಲಿನಿಂದ ಹಾಡಿದ್ದು,ಇಂಪಾದ ಕೃತಿಯೊಂದು ಮತ್ತೆ ಮತ್ತೆ ನೆನಪಿಗೆ ಬಂದು ಅದು ಮೊದಲು ಕೇಳಿದಾಗಿನ ಸುಖಕ್ಕೆ ಹೆಚ್ಚಿನ ಮೆರುಗು ಪಡೆದದ್ದು, ಆ ರೀತಿಯ ಬದುಕು ಮಂದ್ರದಲ್ಲಿ ಅಂತರ್ಮುಖಿಯಾಗಿ ತನಗೆ ತಾನೇ ಗುನುಗಿಕೊಂಡು, ಮಧ್ಯಮಕಾಲ ಮಧ್ಯಮಸ್ಥಾಯಿಗಳಲ್ಲಿ ಬದುಕೆಂಬ ಚಕ್ರಭೀಮನ ಕೋಟೆಯ ಎಲ್ಲ ರಹಸ್ಯ ಮಾರ್ಗಗಳಲ್ಲೂ ಸಂಚರಿಸಿ, ಸೌರದಲ್ಲಿ ಬಾಹ್ಯಾಂತರಿಕ್ಷದ ನೀಲಿಯಲ್ಲಿ ಲೀನವಾದ ಆಕೃತಿ ಈಗಲೂ ಆಗಿನಷ್ಟೇ ಸ್ಫುಟವಾಗಿ ಮನಸ್ಸಿನಲ್ಲಿ ನೆಲೆಸಿದ್ದನ್ನು ನೆನೆಯುತ್ತಾರೆ. ಇದು ಮೂರ್ತಿರಾಯರು ಬದುಕನ್ನು ಅರ್ಥಮಾಡಿಕೊಂಡ ಬಗೆಯಾಗಿದೆ.

ಕೃತಿಗಳು

ಹಗಲುಗನಸುಗಳು

ಸಂಕಲನದ ಮೊದಲ ಪ್ರಬಂಧವಾದ 'ಗೌರಜ್ಜಿ'ಯಲ್ಲಿ ಲೇಖಕರು - ಅಭಿವ್ಯಕ್ತಿಯ ಕ್ರಮದಲ್ಲಿ - ಬಾಲ್ಯವನ್ನು ಅನಾವರಣಗೊಳಿಸುವ ಶೈಲಿ ಹಾಗೂ ಶಕ್ತಿಯುತವಾಗಿ ಆ ಪರಿಸರವನ್ನು ಮತ್ತೊಮ್ಮೆ ಪುನಃಸೃಷ್ಟಿಸುವ ಕ್ರಿಯೆಯು ಅಚ್ಚರಿಗೊಳಿಸುತ್ತದೆ. ಇಲ್ಲಿ ಗೌರಜ್ಜಿ ಹೇಳುವ ಲೇಖಕರ ತಂದೆಯ ಬಾಲ್ಯದ ವಿವರಗಳು, ಗೌರಜ್ಜಿಯ ವೈಯಕ್ತಿಕ ವಿವರಗಳು ಮತ್ತು ಲೇಖಕರ ಬಾಲ್ಯ ಒಂದರೊಳಗೊಂದು ಹೆಣೆದುಕೊಂಡು ಅಂತಿಮವಾಗಿ ಸಾಧಿಸುವ ಪರಿಣಾಮಕತೆಯು ಕುತೂಹಲಕರವಾಗಿದೆ.

ಬದುಕಿನ ಎಲ್ಲ ವಿಷಾದಗಳನ್ನು ನುಂಗಿಕೊಂಡು ಅದನ್ನು ಮರೆಸುವ, ಹಾಸ್ಯದ ಲೇಪದಲ್ಲಿ ಅದನ್ನು ತೇಲಿಸುತ್ತಾ ಆನಂದವನ್ನೇ ಅರಸುವ ಗೌರಜ್ಜಿಯ ಸ್ವಭಾವದ ಎಳೆ ಪ್ರಬಂಧಕಾರರಲ್ಲೂ ಬೆಸೆದುಕೊಂಡಿದೆ. ಪ್ರಬಂಧದ ಕೊನೆಯಲ್ಲಿ ..... ಗೌರಜ್ಜಿಗೆ ಮಕ್ಕಳಿಲ್ಲ. ಆದರೂ ಚಿಕ್ಕವಯಸ್ಸಿನಿಂದಲೂ ಸಮೀಪ ಬಂಧುಗಳ ಮಕ್ಕಳನ್ನು ಸಾಕಿ ಸಲಹಿದ್ದುದರಿಂದ ಇಂಥ ಆಶ್ರಯ ಅವರಿಗೆ ದೊರೆತಿತ್ತು. ಅವರ ಸ್ವಭಾವದಲ್ಲಿ ಕಾಠಿನ್ಯಕ್ಕೆ ಬದಲಾಗಿ ಅಪೂರ್ವವಾದ ಒಂದು ಮಾರ್ದವವು ತೋರಿ ಬರುತ್ತಿತ್ತು ಎನ್ನುತ್ತಾರೆ.

ಈ ಸಂಕಲನದ 'ಹೂವುಗಳು' ಪ್ರಬಂಧವು ಹೆಸರೇ ಸೂಚಿಸುವಂತೆ ಹೂಗಳ ಕುರಿತಾದುದಾಗಿದೆ. ಹೂಗಳ ವೈವಿಧ್ಯತೆ, ಗುಣ, ಲಾಲಿತ್ಯ, ಕೋಮಲತೆಯನ್ನು ವಿವರಿಸುತ್ತಲೇ ಮನುಷ್ಯ ಸ್ವಭಾವದ ವೈಚಿತ್ರ್ಯಗಳನ್ನಾರೋಪಿಸಿ ಅವುಗಳ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. ಪ್ರಕೃತಿಯ ಒರಟುತನದೊಂದಿಗೆ ಅದರ ಇನ್ನೊಂದು ಮುಖವಾದ ಕೋಮಲತೆಯ ಸ್ವರೂಪವನ್ನು ಪರಿಣಾಮಕಾರಿಯಾಗಿ ಹೇಳಿದ್ದಾರೆ. ''ಪ್ರಕೃತಿಯಂಥ ಅದ್ಭುತ ಕೌಶಲ್ಯವುಳ್ಳ ಶಿಲ್ಪಿ ಇನ್ನೆಲ್ಲಿಯೂ ಇಲ್ಲ. ಎಷ್ಟು ಒರಟಾದ ನಯ ನೀತಿಗೊಳಪಡದ ಸಾಮಗ್ರಿಗಳಿಂದಲಾದರೂ ದಿವ್ಯವಾದ ಕಲಾವಸ್ತುಗಳನ್ನು ನಿರ್ಮಿಸಬಲ್ಲಳು'' ಎಂದು ಸೃಷ್ಟಿಯ ಬೆರಗಿಗೆ ಅಚ್ಚರಿ ಸೂಚಿಸುವ ಲೇಖಕರು ಕೊನೆಯಲ್ಲಿ ''ಹೂವುಗಳ ಪ್ರಪಂಚ, ಪರಿಮಳಯುಕ್ತವಾದ ಮಕರಂದದ ಪ್ರಪಂಚ, ನಮಗೆ ಎಷ್ಟು ಹತ್ತಿರವಾದುದಾದರೂ ನಾವು ನವನಾಗರಿಕತೆಯ ನೂರೆಂಟು ಹಂಬಲುಗಳಲ್ಲಿ ಅದನ್ನು ಮರೆತು ದೂರಮಾಡಿಕೊಂಡಿದ್ದೇವೆ. ಸುತ್ತಲೂ ಸೌಂದರ್ಯವೇನೋ ತುಂಬಿದೆ; ನೋಡಲು ಕಣ್ಣು ಬೇಕು, ಅನುಭವಿಸಲು ತಕ್ಕ ಮನೋವೃತ್ತಿ ಬೇಕು'' ಎನ್ನುತ್ತಾರೆ. ಈ ಪ್ರಬಂಧದ ಕಾವ್ಯಗುಣವನ್ನು ಶ್ರೀ ಜಿ. ಎಸ್.

ಶಿವರುದ್ರಪ್ಪನವರು ಹೂವುಗಳು ಎನ್ನುವ ಪ್ರಬಂಧವನ್ನು ನೀವು ಓದಿದರೆ ಒಂದು ಭಾವಗೀತೆಯನ್ನು ಓದಿದಾಗ ಆಗುವ ಅನುಭವ ಆಗುತ್ತದೆ. ಮೂರ್ತಿರಾಯರು ಪದ್ಯವನ್ನು ಬರೆಯಲಿಲ್ಲ ನಿಜ. ಆದರೆ ಈ ಪ್ರಬಂಧವನ್ನು ಓದಿದಾಗ ಪದ್ಯವನ್ನು ಓದಿದ ಅನುಭವ ನಮಗಾಗುತ್ತದೆ (ಮೂರ್ತಿರಾಯರ ಸಾಹಿತ್ಯವನ್ನು ಕುರಿತ ವಿಚಾರಸಂಕಿರಣದ ಭಾಷಣದಲ್ಲಿ, ಕುವೆಂಪು ವಿ. ವಿ. ಮಾರ್ಚ್೧೯೮೮) ಎಂದು ವಿವರಿಸುತ್ತಾರೆ.

'ಲಲಿತೆಯ ವಿದ್ಯಾಭ್ಯಾಸ' ಮತ್ತು 'ಪ್ರಣಯಯಾತ್ರೆ' ಇವು ದಾಂಪತ್ಯವನ್ನು ಕುರಿತದ್ದಾಗಿವೆ. 'ಲಲಿತೆಯ ವಿದ್ಯಾಭ್ಯಾಸ' ಪ್ರಬಂಧದಲ್ಲಿ ಲಲಿತೆಗೆ ಇಂಗ್ಲಿಷ್ ಕಲಿಸುವ ನೆವದಲ್ಲಿ ಬೆಳೆಯ ತೊಡಗುವ ಪ್ರಬಂಧದ ಪರಿಸರವು; ಪರಸ್ಪರರ ನಡುವೆ ಹುಟ್ಟಿಕೊಂಡ ಉಪಾಧ್ಯಾಯ-ಶಿಷ್ಯೆ ಎಂಬ ತಡೆ, ಆ ತಡೆಯೇ ಕಾರಣವಾಗಿ ಪ್ರೇಮದ ಉತ್ಕರ್ಷಕ್ಕೆ ವಾಹಕವಾಗುವುದು; ಆತ್ಯಂತಿಕ ಪರಿಣಾಮವನ್ನು ತೀವ್ರಗೊಳಿಸುವಲ್ಲಿ ಇಬ್ಬರು ನಟಿಸುವ ಬಿಗುಮಾನ, ಅಂತಿಮವಾಗಿ ಪ್ರಬಂಧ ಪಡೆವ ಯಶಸ್ಸು ಓದುಗರನ್ನು ಗಾಢವಾಗಿ ಪ್ರಭಾವಿಸುವ ಗುಣಪಡೆದುಕೊಂಡಿದೆ. ದಂಪತಿಗಳಿಬ್ಬರ ಪ್ರೀತಿಯು ಗುಪ್ತವಾಗಿ ಪ್ರವಹಿಸುವ ನದಿಯೆ ಆಗಿದ್ದು ಹೊರನುಗ್ಗಲು ಹಾತೊರೆಯುತ್ತದೆ. 'ಪ್ರಣಯ ಯಾತ್ರೆ' ಪ್ರಬಂಧವು ದೈನಂದಿನ ಬದುಕು ಯಾಂತ್ರಿಕವೆನ್ನಿಸಿದ್ದರಿಂದಲೂ ಮತ್ತು ಮನೆಯಲ್ಲಿ ತಾಯಿಯೆದುರು ಬಿಗಿಯಾಗಿ ವರ್ತಿಸಬೇಕಾದುದರಿಂದಲೂ ರಜೆಪಡೆದು ಸ್ವಲ್ಪಕಾಲ ಮನೆಯಿಂದ ದೂರ ಹಳ್ಳಿಯೊಂದರಲ್ಲಿ ಇರತೊಡಗಿದುದು, ಅಲ್ಲಿಯ ತಮಾಷೆಯ ಸಂಗತಿಗಳು, ಪ್ರಣಯಕಲಹ ಮೊದಲಾದವುಗಳನ್ನೊಳಗೊಂಡುದಾಗಿದೆ.

'ಗಾಡಿಯ ಪ್ರಯಾಣ' ಪ್ರಬಂಧದಲ್ಲಿ ಲೇಖಕರು ಬಾಲ್ಯದಲ್ಲಿ ಗಾಡಿಯ ಪ್ರಯಾಣದ ಅನುಭವ ಅದರ ಸಂಭ್ರಮವನ್ನು, ಪ್ರಯಾಣದ ವೇಳೆಯಲ್ಲಿ ಎದುರಾಗುವ ದೆವ್ವ, ಜಡೆಮುನಿ, ಇಲವಾಲದ ಬೇರೆಯ ಕಳ್ಳರು ಮುಂತಾದ ಆತಂಕಗಳನ್ನು ಮೀರಿ ಪಡೆವ ಬೆಳದಿಂಗಳು, ರಾತ್ರಿಯ ನೀರವತೆಯ ಸುಖವನ್ನು ಪುನರ್ಸೃಷ್ಟಿಸುತ್ತಾರೆ. ವಸ್ತುವಿಗೆ ತಕ್ಕ ಹಾಗೆ ಇಲ್ಲಿಯ ಭಾಷೆ ಸಮ್ಮೋಹಕ ಗುಣಪಡೆದುಕೊಂಡಿದೆ. ಶ್ರೀ ಎಲ್. ಎಸ್. ಶೇಷಗಿರಿರಾಯರು ಈ ಪ್ರಬಂಧದಲ್ಲಿ ಸಂಕೇತವಾಗುವ ಚಲನೆಯನ್ನು ಮತ್ತು ಪ್ರಬಂಧದ ಒಟ್ಟು ಆಶಯವನ್ನು 'ಒಬ್ಬ ವ್ಯಕ್ತಿಯ ಸಂಕುಚಿತ ಬದುಕಿನಿಂದ ಬಿಡುಗಡೆಯಾಗಿ ಸಮಸ್ತ ಸೃಷ್ಟಿಯ ಭಾಗವಾಗುವ ಅನುಭವ ಇಲ್ಲಿ ಆಗುತ್ತದೆ. ಭೌತಿಕ ಜಗತ್ತಿನಲ್ಲಿ ಒಂದು ನಿರ್ದಿಷ್ಟ ರಾತ್ರಿಯಲ್ಲಿ ಪ್ರಾರಂಭವಾದ ಅನುಭವ ಕಾಲ ದೇಶಗಳಾಚೆ, ಒಂದು ವಿಶಿಷ್ಟವಾದ ಮಾನಸಿಕ ಯಾತ್ರೆಯಾಗುತ್ತದೆ. ಇದನ್ನು ವಿಶಾಲವಾದ ಅರ್ಥದಲ್ಲಿ 'ಆಧ್ಯಾತ್ಮಿಕ ಯಾತ್ರೆ' ಎಂದೂ ಎನ್ನಬಹುದು' ಎಂಬ ಅಭಿಪ್ರಾಯಕ್ಕೆ ಬರುತ್ತಾರೆ (ವಿಚಾರಸಂಕಿರಣ, ಮಾರ್ಚ್, ೧೯೮೮). ಈ ಪ್ರಬಂಧದ ಸಮ್ಮೋಹಕ ಭಾಷೆಗೆ ನಿದರ್ಶನವಾಗಿ ಕೆಲಸಾಲುಗಳನ್ನು ನೋಡಬಹುದು. ''ಈಗ ನನಗೆ ಮೋಟಾರಿನ ಕನಸಿಗಿಂತಲೂ ಕೆಲವು ವೇಳೆ ಗಾಡಿಯ ಪ್ರಯಾಣದ ಕನಸೇ ಹೆಚ್ಚಾಗಿದೆ. ಬೆಳುದಿಂಗಳಲ್ಲಿ ನೆನೆದು ಹರಿಯುತ್ತಿರುವ ಹುಣ್ಣಿಮೆಯ ರಾತ್ರಿ, ಸಾಲುಮರಗಳ ನಡುವೆ ಸುತ್ತಿಕೊಂಡು ಹೋಗುವ ರಸ್ತೆ, ಒಳ್ಳೆಯ ಜಾತಿಯ ಎತ್ತುಗಳು ತುಯ್ಯುತ್ತಿರುವ ಗಾಡಿ,

ಜೊತೆಯಲ್ಲಿ ನನ್ನ ನಲ್ಲೆ ; ಪ್ರಯಾಣವು ನಿಧಾನವಾದರೇನು, ನಿಶ್ಚಿತ ಸ್ಥಳವನ್ನು ಎಂದು ತಲುಪಿದರೇನು.... ತಲುಪದಿದ್ದರೆ ತಾನೆ ಏನು !''

ಕಡೆಯದಾಗಿ ಇದೇ ಸಂಕಲನದಲ್ಲಿಯ 'ಕುರುಡ' ಪ್ರಬಂಧವು ಅಸಾಹಯಕ ಮತ್ತು ನಿರ್ಗತಿಕ ಕುರುಡ ಮತ್ತವನ ತಾಯಿಯ ಕುರಿತಾಗಿ ಇಬ್ಬರು ವ್ಯಕ್ತಿಗಳ ಪ್ರತಿಕ್ರಿಯೆಗಳನ್ನೊಳಗೊಂಡುದಾಗಿದೆ. ಲೇಖಕರು ಪ್ರಬಂಧದ ಕಡೆಯಲ್ಲಿ ''ಆದರೆ ನನ್ನ ಮರುಕಕ್ಕೂ ಲಲಿತೆಯ ಮರುಕಕ್ಕೂ ಎಷ್ಟು ಭೇದ ! ನನ್ನದು ದೂರದ ಮರುಕ. ಅದಕ್ಕೂ ಅದರ ಪಾತ್ರಕ್ಕೂ ನಡುವೆ ಅನೇಕ ತಡೆಗಳಿದ್ದವು. ಆ ಭಿಕ್ಷುಕನಿಗೆ ಸಹಾಯ ಮಾಡಿದ್ದು ಇತರರ ಕಣ್ಣಿಗೆ ಬೀಳಬಾರದೆಂಬ ಅಪೇಕ್ಷೆಯೊಂದು ಕಡೆ; ಜೊತೆಗೆ ಆ ದುಃಖಃ ಪ್ರಸಂಗವು ಆದಷ್ಟು ಬೇಗ ಕಳೆದು ಹೋಗಲೆಂಬ ಆಪೇಕ್ಷೆಯೂ ಇದ್ದಿರಬಹುದು......... ಲಲಿತೆಯ ಮರುಕವು ಆ ತಡೆಗಳನ್ನು ದಾಟಿ ಆ ವೃದ್ಧೆಯನ್ನು ಸೇರಿತು; ಹೃದಯವು ಹೃದಯದೊಂದಿಗೆ ಬೆರೆಯಿತು'' ಎಂದು ಹೇಳುತ್ತಾರೆ. ಮಾನವೀಯತೆ ಕೇವಲ ಶಾಬ್ದಿಕವಾಗಿಯೂ ಮೇಲು ಮೇಲಿನದಾದಾಗ ಅದು ಕೇವಲ ತೋರಿಕೆಯ, ಕ್ರಿಯಾರಾಹಿತ್ಯವಾಗಿಬಿಡುತ್ತದೆ. ಕ್ರಿಯಾಶೀಲವಾಗದ ಮಾನವೀಯತೆಯು ಕೇವಲ ಮಾತಿನ ಬಡಬಡಿಕೆಯಾಗುತ್ತದೆಂಬುದನ್ನು ಈ ಪ್ರಬಂಧ ಸೊಗಸಾಗಿ ನಿರೂಪಿಸುತ್ತದೆ.

ಅಲೆಯುವ ಮನ

ಅಲೆಯುವ ಮನ ಲೇಖಕರ ಎರಡನೆಯ ಪ್ರಬಂಧ ಸಂಕಲನವಾಗಿದೆ. ಶೀರ್ಷಿಕೆಯ ಪ್ರಬಂಧವು ಸಂಕಲನದಲ್ಲಿಲ್ಲದಿದ್ದರೂ ಇಲ್ಲಿ ರೂಪುಗೊಂಡ ಪ್ರಬಂಧಗಳ ಹಿನ್ನೆಲೆಯ ಮನಸ್ಥಿತಿಯನ್ನು ಇದು ಪ್ರತಿನಿಧಿಸುತ್ತದೆ. 'ದಿವಾನಖಾನೆಯ ಅಂದ ಚೆಂದ', 'ವ್ಯಾಘ್ರಗೀತೆ,' 'ಮಹಾರಾಜಾಕಾಲೇಜಿನ ಕಾಮನ್‌ರೂಮ್' ಮತ್ತು 'ಅಕ್ಕಿಹೆಬ್ಬಾಳು' ಇವುಗಳನ್ನು ಸಂಕಲನದ ಪ್ರಾತಿನಿಧಿಕ ಪ್ರಬಂಧಗಳನ್ನಾಗಿ ನೋಡಬಹುದಾಗಿದೆ. ದಿವಾನಖಾನೆಯನ್ನು ಅಚ್ಚುಕಟ್ಟಾಗಿಟ್ಟು ಅದರ ಅಂದಚೆಂದವನ್ನು ಸಾಕಾರಗೊಳಿಸಿಯಾದ ಮೇಲೆ ಎದುರಾಗುವ ಆತಂಕ ಅದರ ವ್ಯವಸ್ಥಿತತೆಯೇ ಕಿರಿಕಿರಿಯಾಗಿ ಲೇಖಕರು ಕಡೆಗೆ ಅಲ್ಲಿಗೆ ಕಾಲಿಡುವುದನ್ನೆ ನಿಲ್ಲಿಸಿ ಬಿಡುವ ಮಟ್ಟಕ್ಕೆ ಹೋಗಿದೆ.

''ಬೆಳಕಿನಲ್ಲಿ ಹೊಳೆದು, ನೆರಳಿನಲ್ಲಿ ನೀಲವಾಗಿ, ಇಲ್ಲಿ ಶಾಂತವಾಗಿ ಹರಿದು, ಅಲ್ಲಿ ಉತ್ಸಾಹದಿಂದ ಮುಂದೆ ನುಗ್ಗಿ, ಒಮ್ಮೆ ಸಾಹಸದಿಂದ ಧುಮುಕಿ ಮತ್ತೊಮ್ಮೆ ಮಂಜುಳವಾಗಿ ಹಾಡಿಕೊಂಡು ಹರಿಯಬೇಕಾದ ಜೀವನವಾಹಿನಿ ಇಲ್ಲಿ ಮಾತ್ರ ನಿಶ್ಚಲವಾಗಿ ನಿಂತು ಹೋಗಿದೆ. ಒಂದು ವಿಧವಾದ ಪರಿಪೂರ್ಣತೆಯನ್ನು ಪಡೆದ ಈ ಸೌಂದರ್ಯ ನನ್ನ ಕಣ್ಣಿಗೆ ಸಿಂಗರಿಸಿದ ಶವದಂತೆ ಕಾಣುತ್ತದೆ. ಪ್ರಕೃತಿ ಜೀವನದಲ್ಲಾಗಲಿ ಮಾನವನ ಜೀವನದಲ್ಲಾಗಲಿ ಈ ಬಗೆಯ ಪರಿಪೂರ್ಣತೆಯೂ ನಿಶ್ಚಲತೆಯೂ ಕಾಣುವುದಿಲ್ಲ'' ವೆಂಬುದಾಗಿ ಮನುಷ್ಯ ತಾನಾಗಿಯೇ ತನ್ನ ಸುತ್ತ ಕಟ್ಟಿಕೊಳ್ಳುವ ಭೌತ ವಸ್ತುಗಳ ಗೋಜಲನ್ನು ಸೊಗಸಾಗಿ ವಿವರಸಿದ್ದಾರೆ. ವಸ್ತು ಜಗತ್ತಿನ

ಸಂಕೀರ್ಣದೊಳಗಿಂದ ಬಿಡಿಸಿಕೊಂಡು ಸರಳವಾದಷ್ಟು ಮನುಷ್ಯ ಸ್ವಚ್ಛಂದದ ಲಹರಿ ಪಡೆಯುತ್ತಾನೆಂಬ ತುಡಿತವಿದೆ ಈ ಪ್ರಬಂಧದಲ್ಲಿ.

'ವ್ಯಾಘ್ರಗೀತೆ'ಯು ಹುಲಿಗಳು ಯಾರ ಮೇಲೂ ಹಿಂದಿನಿಂದ ನೆಗೆಯುವುದಿಲ್ಲವೆಂದು ಮಿತ್ರರೊಬ್ಬರು ಮುಂದಿಟ್ಟ ಥಿಯರಿಯೊಂದನ್ನು ಲೇಖಕರು ಆಧಾರವಾಗಿಟ್ಟುಕೊಂಡು ರಚಿಸಿದ ಪ್ರಬಂಧವಾಗಿದೆ. ಇದು ವಸ್ತು, ತಂತ್ರ, ಅಭಿವ್ಯಕ್ತಿಯ ಕ್ರಮದಿಂದಾಗಿ ಹೆಚ್ಚಾಗಿ ಸಣ್ಣಕಥೆಯನ್ನು ಹೋಲುತ್ತದೆ. ಶಾನುಭೋಗರು ಕೆಲಸದ ನಿಮಿತ್ತ ಬೇರೆ ಊರಿಗೆ ಹೋದವರು ಸಂಜೆಯ ಹೊತ್ತಿಗೆ ಮರಳಿ ಊರಿಗೆ ಹೊರಟಾಗ ಊಟದ ಹೊತ್ತಿಗೆಲ್ಲ ಮನೆ ಸೇರಬೇಕೆಂಬ ಆತುರದಲ್ಲಿ ಕಾಡಲ್ಲಿ ನಡೆಯುತ್ತಿರುವಾಗ ಹುಲಿ ಇದಿರುಗೊಳ್ಳುತ್ತದೆ. ಹುಲಿಗಳು ಯಾರ ಮೇಲೂ ಹಿಂದಿನಿಂದ ನೆಗೆಯುವುದಿಲ್ಲವಾದ್ದರಿಂದ ಶ್ಯಾನುಭೋಗರು ಅದರೊಡನೆ ಬೆನ್ನು ತೋರಿಸುವ ಕಸರತ್ತು ನಡೆಸಿ ತಾವೂ ಸುಸ್ತಾಗಿದ್ದಲ್ಲದೆ ಅದನ್ನು ಸುಸ್ತುಗೊಳಿಸಿ ಅಂತಿಮ ಪ್ರಯತ್ನವಾಗಿ ಹತ್ತಿರದ ಮರವನ್ನು ಹತ್ತಲು ಹೋದಾಗ ಎಡವಿ ಬೀಳುತ್ತಾರೆ. ಅದೂ ಬೋರಲು ಬಿದ್ದುದರಿಂದ ಹುಲಿಗೆ ಹತಾಶೆಯಿಂದ ಏನು ಮಾಡಲೂ ಆಗುವುದಿಲ್ಲ. ಅಷ್ಟರಲ್ಲಿ ಊರಿನ ಕಡೆಗೆ ಹೋಗುವ ಗಾಡಿಗಳ ಸದ್ದಿನಿಂದ ಹುಲಿ ಹೊರಟು ಹೋಗುತ್ತದೆ. ಗಾಡಿಯವರು ಶಾನುಭೋಗರನ್ನು ಊರಿಗೆ ಕರೆದೊಯ್ಯುತ್ತಾರೆ. ತಮಾಷೆಯ ವಿಷಯವೊಂದನ್ನು ಲೇಖಕರು ತಮ್ಮ ಕಲ್ಪಕತೆಯಿಂದ ರಮ್ಯವಾಗಿ ಮತ್ತು ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ.

ತಾವು ಅಧ್ಯಾಪಕರಾಗಿ ಕೆಲಸ ನಿರ್ವಹಿಸಿದ 'ಮಹಾರಾಜ ಕಾಲೇಜಿನ' ಗೆಳೆಯರೆಲ್ಲ ಒಂದೆಡೆ ಸೇರುವ ಸ್ಥಳ ಮತ್ತು ಅಲ್ಲಿ ನಡೆಯುವ ಚರ್ಚೆ, ಆಗು ಹೋಗುಗಳನ್ನು ''......ಕಾಮನ್ ರೂಮು'' ಪ್ರಬಂಧವು ಸೊಗಸಾಗಿ ನಿರೂಪಿಸುತ್ತದೆ. ಸಮಾನ ಅಭಿರುಚಿಯ, ತಾರುಣ್ಯದ ಮಿತ್ರರೆಲ್ಲ ಒಂದೆಡೆ ಸೇರಿ ಸಾಹಿತ್ಯ, ರಾಜಕಾರಣ ಮೊದಲಾಗಿ ಅವರ ದೈನಂದಿನ ಬದುಕಿನ ವಿವರಗಳ ಬಗೆಗೆ ಚರ್ಚೆ, ಹಾಸ್ಯ, ವಿನೋದ, ವಿಡಂಬನೆ ಮೊದಲಾದುವನ್ನೊಳಗೊಂಡ ವರ್ಣಮಯ, ವಿವರಗಳನ್ನು ಈ ಪ್ರಬಂಧ ಹೇಳುತ್ತದೆ. ಕೇವಲ ಕಾಲಹರಣ ಮಾಡಲೋ ಸಿನಿಕತನದಿಂದ ಏನನ್ನೋ ಹರಟುವುದಕ್ಕೋ ಸೀಮಿತಗೊಳ್ಳದೆ ಕಲಿಕೆ, ಸ್ವವಿಮರ್ಶೆ ಇದನ್ನೊಳಗೊಂಡಂತೆ ಸಮಾನ ಮನಸ್ಸುಗಳು ಒಂದೆಡೆ ಸೇರಿ ಮಥಿಸುವಾಗ ಹುಟ್ಟುವ ನಿರ್ಮಲ ಆನಂದದ ಹೊಳೆ ಇಲ್ಲಿ ತಾನೇ ತಾನಾಗಿ ಹರಿದಿರುವುದನ್ನು ಕಾಣಬಹುದು. 'ತ್ಯಾಗರಾಜರ ಮತ್ತು ದೀಕ್ಷಿತರ ಕೃತಿಗಳು', ಈಸ್ಕಿಲಸ್ಸನ ಮತ್ತು ಷೇಕ್ಸ್‌ಪಿಯರ್‌ನ ನಾಟಕಗಳು, ರಸೆಲ್ಲನ ಸಂದೇಹವಾದ, ವರ್ಡ್ಸ್‌ವರ್ತನ ಅನುಭಾವ - ಇಂಥ ಸರಕುಗಳನ್ನು ಸೇರಿಸಿ ಭಟ್ಟಿ ಇಳಿಸಿದ 'ಮದ್ಯ' ವನ್ನು ಅವರೆಲ್ಲ ಸೇವಿಸುತ್ತಿದ್ದುದಾಗಿಯೂ ಅದನ್ನು ಕುಡಿದು ಓಲಾಡುವ ಅಭ್ಯಾಸ ಇನ್ನೂ ನಮ್ಮಲ್ಲಿ ನಿಂತಿದೆ; ಅದರ ಅಮಲು ಕಾಲು ಶತಮಾನ ಕಳೆದರೂ ಇಳಿದಿಲ್ಲವೆನ್ನುತ್ತಾರೆ ಲೇಖಕರು.

ಇದೇ ಸಂಕಲನದ ''ಅಕ್ಕಿಹೆಬ್ಬಾಳು'' ಪ್ರಬಂಧವು ಲೇಖಕರ ಮನದಲ್ಲಿ ಜೀವಂತವಾಗಿದ್ದ ಹಿಂದಿನ ಅಕ್ಕಿಹೆಬ್ಬಾಳಿನ ಚಿತ್ರ ಮತ್ತು ತರುವಾಯ ಮಲೇರಿಯಾದಿಂದ ಬೇರೊಂದೆಡೆಗೆ ವರ್ಗಾಯಿಸಲ್ಪಟ್ಟ ಊರಿನ ಚಿತ್ರವನ್ನು ವಿಷಾದದಿಂದಲೇ ಚಿತ್ರಿಸುತ್ತದೆ.

ಆಪ್ತವಾಗಿದ್ದ ತಮ್ಮೊಳಗೆ ಜೀವಂತವಾಗಿದ್ದ ಸಂಸ್ಕೃತಿಯ ಚಿತ್ರಣವೊಂದು ಮೌಲ್ಯಪಲ್ಲಟದೊಂದಿಗೆ ಬದಲಾಗುತ್ತಿರುವ ವಸ್ತುಸ್ಥಿತಿಯ - ಹೊಸ ಅಕ್ಕಿ ಹೆಬ್ಬಾಳು - ಎದುರಿಗೆ ನಿಂತಾಗ ಎದುರಿಸುವ ತಲ್ಲಣಗಳನ್ನು ಲೇಖಕರು ನಿರೂಪಿಸುತ್ತಾರೆ. ಮನುಷ್ಯ ತನ್ನ ನೆಲಜಲ ಮೊದಲಾಗಿ ಬದುಕುವ ಪರಿಸರದೊಂದಿಗೆ ಪಡೆದ ಸಾವಯವ ಸಂಬಂಧವು ಅದರ ರೂಪ ಪಲ್ಲಟದೊಂದಿಗೆ ಕಣ್ಮರೆಯಾದರೂ ಮತ್ತೆ ಅದು ನೆನಪುಗಳ ಮೂಲಕ ಕಳೆದು ಹೋದುದರೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳುತ್ತದೆಯಲ್ಲದೆ ಸಂಸ್ಕೃತಿಯೊಳಗಿನ ಆಶಯಗಳು ಜೀವಂತವಾಗುಳಿಯುತ್ತವೆಯೆಂಬ ನಂಬಿಕೆಯು ವ್ಯಕ್ತವಾಗುತ್ತದೆ.

ಮಿನುಗು ಮಿಂಚು

ಇದು ಮೂರನೆಯ ಪ್ರಬಂಧಸಂಕಲನವಾಗಿದ್ದು ಇಲ್ಲಿ ಒಟ್ಟು ೧೩ ಪ್ರಬಂಧಗಳಿವೆ. ಹರಟೆ ಮತ್ತು ಪ್ರಬಂಧ (essay)ಗಳಿಗೆ ಇರುವ ವ್ಯತ್ಯಾಸಗಳನ್ನು ಗುರುತಿಸುತ್ತಾ ''ಹರಟೆಗೆ ಆರಂಭವುಂಟೇ ಹೊರತು ಅಂತ್ಯವೂ ಇಲ್ಲ ಕೇಂದ್ರವೂ ಇಲ್ಲ. ಅನಿಶ್ಚಿತ ಗತಿಯೇ ಅದರ ಲಕ್ಷಣ; ಅದರಿಂದ ಬರುವ ಫಲ ಅನಿರೀಕ್ಷಿತ ಫಲ. 'ಎಸ್ಸೆ'ಗಾದರೋ (ಇದನ್ನು ಲಲಿತ ಪ್ರಬಂಧವೆಂದು ಗುರುತಿಸುತ್ತಾರೆ) ಆದಿ, ಅಂತ್ಯ, ಕೇಂದ್ರಗಳೆಲ್ಲವೂ ಉಂಟು. ಪ್ರಬಂಧಕಾರನ ವ್ಯಕ್ತಿತ್ವವೇ ಅದರ ಕೇಂದ್ರ'' ಮುಂತಾಗಿ ಅವೆರಡನ್ನು ವರ್ಗೀಕರಿಸಿ ಲಕ್ಷಣಗಳನ್ನು ನಿರೂಪಿಸುತ್ತಾರೆ.

'ದೆವ್ವಗಳ ಕುರಿತು' ಪ್ರಬಂಧದಲ್ಲಿ ಅವುಗಳ ಸ್ವಭಾವದ ವೈಚಿತ್ರ್ಯಗಳನ್ನು ವಿವರಿಸುತ್ತಾರೆ. ದೆವ್ವದ ಬಗೆಗಿನ ಮನುಷ್ಯನ ಭಯ ನಿರಾಧಾರವೆಂದು, ಅಷ್ಟೇನೂ ಆತಂಕ ಪಡಬೇಕಾದುದಿಲ್ಲವೆಂದು, ಅವು ' ಆನಂದ ಪಡೆಯುವುದು ಜನರ ಸಂಕಟದಿಂದಲ್ಲ, ಅವರ ಭಯ ಆಶ್ಚರ್ಯಗಳಿಂದ' ಎಂದು ಹೇಳುತ್ತಾರೆ. ಅವುಗಳ ತುಂಟತನದ ಸ್ವಭಾವದೊಂದಿಗೆ ಮಾನವೀಯ ಮುಖವೊಂದನ್ನು ಸಹ ಕತೆಯೊಂದರ ಮೂಲಕ ಚಿತ್ರಿಸುತ್ತಾರೆ. 'ನಮ್ಮ ದೇಹದಲ್ಲಿ ನಡೆಯುತ್ತಿರುವ 'ಜೀವ' ಎಂಬ ರಾಸಾಯನಿಕ ಕ್ರಿಯೆ ನಿಂತ ಮೇಲೂ ಏನೋ ಒಂದು ಅಂಶ ಅಳಿಯದೆ ನಿಲ್ಲುತ್ತದೆಂಬ ನಂಬಿಕೆ ನಮಗೆ ಪ್ರಿಯವಾದದ್ದು; ಅಷ್ಟು ಮಾತ್ರವಲ್ಲ, ಆ ಅಂಶ ಉಳಿದಿರಲಿ, ಇಲ್ಲದಿರಲಿ, ಅದರ ಭಯದ ಅಮಲಾದರೂ ನಮಗೆ ಪ್ರಿಯವಾದದ್ದು. ಅದರಿಂದ ನಮ್ಮ ಭಾವ ಜೀವನಕ್ಕೂ ಕಲ್ಪನಾ ಶಕ್ತಿಗೂ ಪ್ರಚೋದನೆಯುಂಟು. ಪುಷ್ಟಿಯೂ ಉಂಟು' ಎನ್ನುವ ಲೇಖಕರು 'ಮಾನವರು ತಮ್ಮ ತಮ್ಮಲ್ಲಿ ಪ್ರದರ್ಶಿಸುವ ಕುಟಿಲತೆ ಕ್ರೌರ್ಯಗಳಿಗಿಂತ ಹೆಚ್ಚಿನ ಕ್ರೌರ್ಯವೇನುಂಟು ಈ ಬಯಲು ಚೇತನಗಳಲ್ಲಿ? ನಮಗಿಂತ ಅವೇ ಸಾವಿರ ಪಾಲು ವಾಸಿ' ಎಂದು ಮನುಷ್ಯ ಸ್ವಭಾವವನ್ನು

ವಿಡಂಬಿಸುತ್ತಾರೆ. ಕೆಟ್ಟತನವನ್ನು ದೆವ್ವಗಳಿಗೆ ಆರೋಪಿಸುವ ಮನುಷ್ಯರನ್ನು ವಿಡಂಬಿಸಲು ಇಲ್ಲಿ ದೆವ್ವಗಳನ್ನು ಬಳಸಿಕೊಂಡಿದ್ದಾರೆ.

'ಡಾ. ವಿಶ್ವೇಶ್ವರಯ್ಯ - ವ್ಯಕ್ತಿ ಮತ್ತು ಐತಿಹ್ಯ' ಪ್ರಬಂಧವು ಉತ್ತಮ ವ್ಯಕ್ತಿ ಚಿತ್ರವಾಗಿದ್ದು, ಭಾರತ ದಾರಿದ್ರ್ಯದಿಂದ ನರಳುವಾಗ ಹುಸಿ ಆಧ್ಯಾತ್ಮಿಕತೆ, ತತ್ವಗಳಿಂದ ಪ್ರಯೋಜನವಾಗದೆಂದು, ಔದ್ಯೋಗೀಕರಣದಿಂದ ಜನರ ಜೀವನ ಮಟ್ಟವನ್ನು ಎತ್ತರಿಸಬಹುದೆಂದು ನಂಬಿದ್ದರು.

''ಕಾಯಕದ ಹಿರಿಮೆ, ಕರ್ತವ್ಯನಿಷ್ಠೆ ಸರ್ವರಿಗೂ ಸಂಪದ್ಯುಕ್ತವಾದ ಪೂರ್ಣ ಜೀವನ - ಇಂಥ ಆದರ್ಶಗಳನ್ನು ನಂಬಿದ ವಿಶ್ವೇಶ್ವರಯ್ಯನವರು ಉಪನಿಷತ್ತುಗಳ ಶ್ರುತಿಗೆ ಹೊಂದುವಂಥ ಜೀವನವನ್ನು ನಡೆಸುತ್ತಿದ್ದರೆಂದು ಧಾರಾಳವಾಗಿ ಹೇಳಬಹುದು. ಅಸ್ಪಷ್ಟವಾದ, ಜೀವನದ ಸಂಬಂಧವನ್ನು ಕಡಿದುಕೊಂಡಿರುವ, ನಿಷ್ಫಲ ಅನುಭಾವವು 'ನಾನೇ ಭಾರತದ ಅಂತರಾತ್ಮ' ಎಂದು ಅನೇಕ ವೇಳೆ ಸೋಗು ಹಾಕುತ್ತದೆ. ಈ ಬಗೆಯ ಅನುಭಾವ ವಿಶ್ವೇಶ್ವರಯ್ಯನವರದು.

ಚಿತ್ರಗಳು ಪತ್ರಗಳು

'ಚಿತ್ರಗಳು ಪತ್ರಗಳು' ಮೂರ್ತಿರಾಯರ ಮುಖ್ಯ ಕೃತಿಗಳಲ್ಲೊಂದು. ಗೆಳೆಯರಾದ ತೀ. ನಂ. ಶ್ರೀಕಂಠಯ್ಯನವರಿಗೆ ಬರೆದ ೭೫ ಪತ್ರಗಳು, ಇಂಗ್ಲೆಂಡಿನಲ್ಲಿದ್ದ ತಮ್ಮ ಮಗ ಸುಬ್ಬರಾಮಯ್ಯನಿಗೆ ಬರೆದ ೫ ಪತ್ರಗಳು ಮತ್ತು ಸೊಸೆ ನ್ಯಾನ್ಸಿಗೆ ಬರೆದ ೧ ಪತ್ರವನ್ನೊಳಗೊಂಡಿದೆ. ಲೇಖಕರು ಮುನ್ನುಡಿಯಲ್ಲಿ ಸ್ಪಷ್ಟಪಡಿಸುವಂತೆ ಕೃತಿಯ ಎರಡನೇ ಭಾಗದಲ್ಲಿರುವ ಪತ್ರಗಳನ್ನು ನೋಡಿದ ಮೇಲೆಯೇ ಮೊದಲ ಭಾಗದಲ್ಲಿಯ 'ಚಿತ್ರ'ಗಳಿಗೆ ಪ್ರೇರಣೆ ದೊರೆತಿದೆ. ಈ ಪತ್ರಗಳು ಮತ್ತೆ ನನ್ನ ಕೈಗೆ ಬರದಿದ್ದರೆ, ಅವನ್ನು ಓದಿ ಹಳೆಯ ಕಾಲದ ನೆನಪುಗಳು ಎಚ್ಚರಗೊಳ್ಳದಿದ್ದರೆ ಮೊದಲ ಭಾಗದ ಚಿತ್ರಗಳನ್ನು ಬರೆಯುವ ಯೋಚನೆಯೇ ಬರುತ್ತಿರಲಿಲ್ಲವೆಂದು ಮುನ್ನುಡಿಯಲ್ಲಿ ವಿವರಿಸಿದ್ದಾರೆ.

ನಡುವಯಸ್ಸಿನ ಅವರ ಬದುಕಿನ ಮುಖ್ಯ ಘಟನೆಗಳು, ಬದುಕನ್ನು ರೂಪಿಸಬಹುದಾದ ತಿರುವುಗಳು, ಪ್ರೇರಣೆಗಳು, ಜೀವನ ಕ್ರಮವನ್ನು ನಿರ್ಧರಿಸಬಹುದಾದ ಸ್ಥಿತಿ ವಿಶೇಷಗಳನ್ನೊಳಗೊಂಡ ಒಳನೋಟಗಳನ್ನು ಈ ಕೃತಿ ನೀಡುತ್ತದೆ. ಪ್ರಕಟಣೆಯ ಉದ್ದೇಶವಿಲ್ಲದೆ ಆಕಸ್ಮಿಕವಾಗಿ ದೊರೆತ ಪತ್ರಗಳು ಮತ್ತವುಗಳ ಆಧಾರದ ಮೇಲೆ ರೂಪುಗೊಂಡ ಚಿತ್ರಗಳು ಪ್ರಯತ್ನಪೂರ್ವಕ ಬರಹದ ಚೌಕಟ್ಟನ್ನು ಮೀರಿವೆ. ಜಿ.ಎಸ್.ಎಸ್. ಅವರು 'ಪ್ರಬಂಧದ ನೆಲೆಗೆ ಸೇರುವಂಥ ಚಿತ್ರಗಳು ಮತ್ತು ಪತ್ರಗಳು - 'ಅಪರವಯಸ್ಕನ ಅಮೇರಿಕಾ-ಯಾತ್ರೆ - ಇವು ಕೂಡ ಆ ಪ್ರಬಂಧದಲ್ಲಿ ಕಾಣುವಂಥ ಮನೋಧರ್ಮದ ವಿಸ್ತರಣೆ ಅಂತ ನಾನು ತಿಳಿದುಕೊಂಡಿದ್ದೇನೆ' (ವಿಚಾರ ಸಂಕಿರಣ, ಮಾರ್ಚ್ ೧೯೮೮) ಎಂದು ಇವುಗಳನ್ನು -ಚಿತ್ರಗಳನ್ನು- ಪ್ರಬಂಧದ ನೆಲೆಯವೆಂದು ಪರಿಗಣಿಸುತ್ತಾರೆ.

ಮ್ಯಾಕ್ಸಿಂ ಟಾಕಿಯವರ ಸಂಕೋಚ ಪ್ರವೃತ್ತಿಯ ಸೂಕ್ಷ್ಮಗಳನ್ನು ಕಂಡುಕೊಳ್ಳುತ್ತಾ ಕಟ್ಟಿಕೊಡುವ ಅವರ ಚಿತ್ರ ಅಪೂರ್ವವಾಗಿದೆ. ಅವರ ಮತ್ತೊಬ್ಬ ಗುರುಗಳಾದ 'ರಾಲೋ' ಅವರನ್ನು '.... ಅವರಿಗೆ ವಿಶಿಷ್ಟವಾದ ಕೆಲವು ಭಂಗಿ, ಆಗಾಗ ಅರ್ಧ ನಮ್ಮೊಡನೆ, ಮತ್ತರ್ಧ ತಮಗೆ ತಾವೇ ಮಾತಾಡುತ್ತಿದ್ದಂತೆ ತೋರುವುದು, ಒಂದು ಬಗೆಯ ಯೋಚನಾಪೂರ್ಣವಾದ ಅಂತರ್‌ದೃಷ್ಟಿ - ಇವೆಲ್ಲ ನನಗೆ ಹ್ಯಾಮ್ಲೆಟ್ ನೆನಪು ತರುತ್ತವೆ' ಎನ್ನುತ್ತಾರೆ. ಬಿ. ಎಂ. ಶ್ರೀಯವರ ಬಗೆಗಿನ ವ್ಯಕ್ತಿಚಿತ್ರವು ಹೊಸ ತಲೆಮಾರಿನ ಓದುಗರಿಗೆ ಅವರ ವ್ಯಕ್ತಿತ್ವದ ಇನ್ನೊಂದು ಮುಖವನ್ನು ಪರಿಚಯಿಸಿಕೊಡುತ್ತದೆ. ಬಿ.ಎಂ.ಶ್ರೀಯವರ ಪ್ರವಚನಕ್ಕೆ ಇತರರದಕ್ಕಿಂತ ಹೆಚ್ಚಿನ ವ್ಯಾಪ್ತಿಯುಂಟು ಎಂಬುದು ಎಲ್ಲರಿಗೂ ತಿಳಿಯಲೆಂದು ಅವರು ಮಿತಿಮೀರಿ ಪ್ರಯತ್ನಿಸಿದರು. ಪ್ರಯತ್ನಪೂರ್ವಕವಾಗಿ ಮೆಚ್ಚಿಕೆಗಳಿಸಹೊರಟಿದ್ದರಿಂದ ಅವರ ಪ್ರವಚನಕ್ಕೆ ಪ್ರದರ್ಶನದ ಸೋಂಕು ತಗುಲಿತೆಂದು ಮತ್ತು ಅವರ ಅತಿಯೆನ್ನಬಹುದಾದ ರಾಜಭಕ್ತಿ ಮೊದಲಾದ ದೋಷಗಳನ್ನು ತೋರಿಸಿಕೊಡುವುದರೊಂದಿಗೆ ಅವರ ಪ್ರತಿಭೆಯ ಮಿತಿಯನ್ನು ಸಹ ವಿವರಿಸುತ್ತಾರೆ. ಶ್ರೀಯವರ ಪ್ರತಿಭೆ ಮಹಾಕೃತಿಯೊಂದರ ಲಯಕ್ಕೆ ಸರಿಯಾಗಿ ಮಿಡಿಯಬಲ್ಲುದು, ಅದರ ಕರೆಗೆ ಓಗೊಡಬಲ್ಲುದು; ಆದರೆ ತಾನೇ ಆ ಮಟ್ಟದ ಕೃತಿಯನ್ನು ಸೃಷ್ಟಿಸಲಾರದು- ಬಹಶಃ ಇದು ಅವರ ಪ್ರತಿಭೆಯ ಗುಣ ಎಂಬುದಾಗಿ ವಿವರಿಸುತ್ತಾರೆ. 'ಕರ್ನಾಟಕದ ಏಕೀಕರಣಕ್ಕೆ ಮತ್ತು ಕನ್ನಡಕ್ಕಾಗಿ ಸಲ್ಲಿಸಿದ ಸೇವೆಯನ್ನು' ಶ್ರೀಯವರು ನಮ್ಮ ಭಾವ ಜೀವನವನ್ನು ಮಾರ್ಪಡಿಸಿ ಕಾರ್ಯೋನ್ಮುಖವಾದ ಶಕ್ತಿ ಕಟ್ಟೆಯೊಡೆದು ಚಿಮ್ಮುವಂತೆ ಮಾಡಿದರು. ಇದು ಬಿ.ಎಂ.ಶ್ರೀ. ಯವರ ನಿಜವಾದ ಸೇವೆ. ಇತರ ಎಲ್ಲ ಸೇವೆಗಳಿಗಿಂತ ಹೆಚ್ಚು ಮಹತ್ವದ್ದು, ಕೃತಜ್ಞತೆಗೆ ಅರ್ಹವಾದದ್ದು'' ಎಂದು ನೆನೆಯುತ್ತಾರೆ.

ತೀ. ನಂ. ಶ್ರೀ ಯವರಿಗೆ ಬರೆದ ಪತ್ರದಲ್ಲಿ ತಾವು ಚಿದಂಬರಂ ಅವರು ಸಂಕಲಿಸಿದ ಬಿ. ಎಂ. ಶ್ರೀ ಯವರ ಭಾಷಣಗಳನ್ನು ಓದಿದಾಗ ''ಅಷ್ಟೇನೂ ಮೃದುವಲ್ಲದ ನನ್ನ ಮನಸ್ಸೂ ಕರಗಿತು. ಅವರ ಮೂರ್ತಿ ಎದುರು ನಿಂತಂತಾಯಿತು. ಅವರ ಕಂಠ ಸ್ವರ ಕೂಡ ಮತ್ತೆ ನೆನಪಾಗುತ್ತದೆ. ಅವರಲ್ಲಿದ್ದ ಸಣ್ಣತನದ ಎಳೆಗೆ ಮೊದಲು ಕೊಡಲಾಗದಿದ್ದ ಸಹಾನುಭೂತಿಯನ್ನು ಈಗ ಕೊಡಬಲ್ಲೆ, ಅದನ್ನು ಮುಚ್ಚಿಕೊಳ್ಳುವ ಶಕ್ತಿ ಅವರಿಗಿರಲಿಲ್ಲ - ಅನ್ಯಾಯ. ಆದ್ದರಿಂದ ಅವರು ಮಗುವಿನಂತೆ. ಅದೂ ಅಲ್ಲದೆ ಒಟ್ಟಿನಲ್ಲಿ ಅವರು ಬಹಳ ದೊಡ್ಡವರು'' ಎಂದು ಸ್ಮರಿಸುತ್ತಾರೆ. ಬದುಕು ಅನಿವಾರ್ಯವಾಗಿ ಹುಟ್ಟು ಹಾಕುವ ಸನ್ನಿವೇಶಗಳು ಸಂದರ್ಭಗಳು ಪೂರ್ವಗ್ರಹಗಳು ವ್ಯಕ್ತಿಯ ನಡವಳಿಕೆಗಳನ್ನು ನಿರ್ಧರಿಸುತ್ತವೆ. ಬದುಕಿನ ಎಲ್ಲಾ ಸರಿತಪ್ಪುಗಳಿಗೆ ಉದ್ದೇಶಪೂರ್ವಕವಾದ ಮನುಷ್ಯನ ನಡತೆಯೆಷ್ಟು ಕಾರಣವೋ ಅಷ್ಟೇ ವರ್ತಮಾನದ ಸಾಮಾಜಿಕ ಸಂದರ್ಭಗಳು ಮತ್ತು ಅಂತಹವೇ ಇತರ ಕಾರಣಗಳು ಇರಬಹುದಾಗಿವೆ.

'ಟಿ. ಎಸ್. ವೆಂಕಣ್ಣಯ್ಯ', 'ಗೋಪಾಲಸ್ವಾಮಿ ಮತ್ತು ಆಕಾಶವಾಣಿ' ಹಾಗು 'ಹನುಮಂತಯ್ಯ ಸಂಸ್ಕೃತಿ ಪ್ರಸಾರ' ಮೊದಲಾದುವು ಇತರ ವ್ಯಕ್ತಿಚಿತ್ರಗಳಾಗಿವೆ.

ಕಾಮನ್‌ರೂಮಿನಲ್ಲಿ ತಮ್ಮೆಲ್ಲರ ಕೂಗಾಟಕ್ಕೆ ವೆಂಕಣ್ಣಯ್ಯನವರಿಂದ ಬಂದ ಪ್ರತಿಕ್ರಿಯೆಯನ್ನು 'ಮಕ್ಕಳ ಆಟವನ್ನು ನೋಡಿ ಹಿರಿಯರ ಮುಖದಲ್ಲಿ ಸೂಸಬಹುದಾದ, ಆದರೆ ಅದಕ್ಕಿಂತ ಹೆಚ್ಚು ಅರ್ಥಪೂರ್ಣವಾದ ಮೆಲುನಗೆಯೆಂಬುದಾಗಿ ತಿಳಿಸುತ್ತಾರೆ. ಒಮ್ಮೆ ಮೂರ್ತಿರಾಯರು ಕೆರೆಯ ಏರಿಯ ಮೇಲೆ ತುಂಬಾ ನಿರಾಶೆಯಿಂದ ಕೂತಿದ್ದಾಗ ಆಗ ಅಷ್ಟೇನೂ ಪರಿಚಿತರಾಗಿರದ ವೆಂಕಣ್ಣಯ್ಯನವರು ಅವರನ್ನು ದಾಟಿ ಮುಂದೆ ಹೋದವರು ವಾಪಾಸು ಬಂದು ಅವರ ಮನಸ್ಸಿನ ದುಗುಡ ಆತಂಕಗಳನ್ನು ಕಳೆದುದನ್ನು ವಿವರಿಸಿ 'ನಿಮ್ಮ ಕೆಲಸ ನೀವು ನೋಡಿಕೊಳ್ಳಿ' ಎಂದೇನಾದರೂ ನಾನು ಅವರಿಗೆ ಹೇಳಿದ್ದರೆ ಅವರು 'ಆಗಬಹುದು. ಆದರೆ ನಿಮ್ಮ ಸಂಕಟಕ್ಕೆ ಸಮಾಧಾನ ಒದಗಿಸುವುದು ನನ್ನಿಂದ ಸಾಧ್ಯವಾದರೆ ಅದೂ ನನ್ನ ಕೆಲಸವೇ' ಎಂದು ಉತ್ತರ ಕೊಡಬಹುದಾಗಿತ್ತು ಎಂಬ ಸಂಗತಿಯನ್ನು ನೆನಪಿಸಿಕೊಂಡು ಅವರ ಮಾನವೀಯ ಅಂತಃಕರಣದ ರೀತಿಯನ್ನು ವಿವರಿಸಿದ್ದಾರೆ. ಗೋಪಾಲಸ್ವಾಮಿಯವರ ಕಾರ್ಯದಕ್ಷತೆಯನ್ನು ವಿವರಿಸುತ್ತಾ ಅವರು ಆಕಾಶವಾಣಿಯಲ್ಲಿ ಕೆಲಸಮಾಡುತ್ತಿದ್ದ ನೌಕರರನ್ನು ಮನಶಾಸ್ತ್ರೀಯ ದೃಷ್ಟಿಯಿಂದ ಅರ್ಥೈಸಿಕೊಳ್ಳುವ ಮತ್ತವರ ನಡತೆಯ ಬಗೆಗೆ ನಿರ್ಣಯಕ್ಕೆ ಬರುವ ಅವರ ಈ ವಿಧಾನದ ಮಿತಿಗಳನ್ನು ಆಧಾರ ಸಹಿತ ಸ್ಪಷ್ಟಪಡಿಸುತ್ತಾರೆ.

'ಪತ್ರಗಳು' ಭಾಗದಲ್ಲಿ ತೀ.ನಂ.ಶ್ರೀ ಯವರಿಗೆ ಬರೆದ ಪತ್ರಗಳೇ ಅಧಿಕವಾಗಿವೆ. ಈ ಪತ್ರಗಳಲ್ಲಿ ಅವರ ವೈಯಕ್ತಿಕ ಬದುಕಿನ ವಿವರಗಳೊಂದಿಗೆ ಸ್ವಾತಂತ್ರ್ಯ ಹೋರಾಟದ ವಿವರ, ಗಾಂಧೀಜಿಯವರು ಮುಸ್ಲಿಮರ ಪರವಾಗಿ ಮಾಡಿದ ಉಪವಾಸದ ವಿವರದೊಂದಿಗೆ ಅವರ ಮರಣದ ಸ್ಮೃತಿಗಳನ್ನೊಳಗೊಂಡ ಪತ್ರಗಳು ಇಲ್ಲಿವೆ. ಅವರ ಹಿರಿಯಮಗ ಸುಬ್ಬರಾಮಯ್ಯ ಇಂಗ್ಲೆಂಡಿನಲ್ಲಿದ್ದಾಗ ಬರೆದ ೫ ಕಾಗದಗಳಲ್ಲಿ ಹಿಂದೂಧರ್ಮದ ಬಗೆಗೆ ವಿವರಣಾತ್ಮಕವಾಗಿ ಅದರಲ್ಲೂ ಅವು ಸುಬ್ಬರಾಮಯ್ಯನ ಪಾಶ್ಚಾತ್ಯ ಮಿತ್ರರಿಗೆ ಅರ್ಥವಾಗುವ ಸರಳ ಶೈಲಿಯಲ್ಲಿ ಬರೆದವುಗಳಾಗಿವೆ. ಇದು ಮೂರ್ತಿರಾಯರ ಉತ್ತಮ ಕೃತಿಗಳಲ್ಲೊಂದಾಗಿದ್ದು ಇದಕ್ಕೆ ೧೯೭೪ ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

ಅಪರವಯಸ್ಕನ ಅಮೇರಿಕಾಯಾತ್ರೆ

ಈ ಕೃತಿ ೧೯೭೫ರಲ್ಲಿ ಮೂರ್ತಿರಾಯರು ಕೈಗೊಂಡ ಅಮೇರಿಕಾ ಪ್ರವಾಸದ ಕಥನವನ್ನೊಳಗೊಂಡಿದೆ. ಒಟ್ಟು ೨೭ ಅಧ್ಯಾಯಗಳಲ್ಲಿ ನಿರೂಪಿತವಾಗಿರುವ ಪ್ರವಾಸದ ಅನುಭವ ಮೂರ್ತಿರಾಯರಿಗೆ ಇಂಗ್ಲಿಷ್ ಸಾಹಿತ್ಯಾಧ್ಯಯನದ ಮೂಲಕ ದತ್ತವಾದ ಪಾಶ್ಚಾತ್ಯ ಜಗತ್ತಿನ ಸೂಕ್ಷ್ಮಗಳು ಮತ್ತು ಅವರ ವಿಶಿಷ್ಟ ಗ್ರಹಿಕೆಗಳಿಂದಾಗಿ ಇದು ಅಪೂರ್ವ ರೀತಿಯ ಪ್ರವಾಸ ಕಥನವಾಗಿ ರೂಪುಗೊಂಡಿದೆ.

ಅಮೇರಿಕಾದಂತಹ ಶ್ರೀಮಂತ, ಭೋಗಜೀವನದ ರಾಷ್ಟ್ರದಲ್ಲಿ ಭಾರತೀಯ ಸಮಾಜದ ಮಡಿವಂತಿಕೆಯ ನಡುವಿನಿಂದ ಬಂದ ಲೇಖಕರು ಎರಡೂ ಸಂಸ್ಕೃತಿಗಳ

ವೈರುಧ್ಯಗಳನ್ನು ಗಮನಿಸುತ್ತಲೇ ಆಧುನಿಕ ಮನುಷ್ಯನ ವಿಪರ್ಯಾಸ, ಕ್ರೌರ್ಯ ಮೊದಲಾದವುಗಳನ್ನು ಕುರಿತು ಚಿಂತಿಸುತ್ತಾರೆ. ಅಮೇರಿಕಾದಲ್ಲಿ ಬದುಕಿನ ವಿಫಲತೆಗಳಿಂದಲೋ, ಸೇಡು, ವೈಯಕ್ತಿಕ ದ್ವೇಷಗಳಿಗಾಗಿಯೋ ನಡೆಯುವ ಕೊಲೆಗಳಿಗಿಂತ ' ಕೊಲೆಗಾಗಿಯೇ ಕೊಲೆ', 'ಹಿಂಸೆಗಾಗಿಯೇ ಹಿಂಸೆ' ಎಂಬ ವಿಕೃತ ಮನಸ್ಥಿತಿಯೊಂದು ಆಧುನಿಕ ವಿಕಾಸಗತಿಯಲ್ಲಿ ರೂಪುಗೊಂಡದ್ದನ್ನು ವಿವರಿಸುತ್ತಾರೆ. 'ಅನೇಕ ವೇಳೆ ಕೊಲೆಪಾತಕನಿಗೂ ಕೊಲೆಯಾದವನಿಗೂ ಪರಿಚಯ ಸಹ ಇಲ್ಲ, ಯಾವ ಸಂಬಂಧವೂ ಇಲ್ಲ. ಕೊಲೆಪಾತಕನಲ್ಲಿ ಪಿಸ್ತೂಲಿತ್ತು, ಕೊಲ್ಲಿಸಿಕೊಳ್ಳುವುದಕ್ಕೆ ಒಬ್ಬ ಸಿಕ್ಕಿದ ಅಷ್ಟೆ!' (ಪು. ೬೪).

'ಕೊಲೆಗಾರಿಕೆಯಲ್ಲಿ ನುರಿತವನೊಬ್ಬ ಇನ್ನೊಬ್ಬನಿಗೆ ಕೊಲೆಮಾಡಬೇಕಾದರೆ ಇಂಥಿಂಥ ಸಿದ್ಧತೆ ಮಾಡಿಕೊಳ್ಳಬೇಕು, ಕೊಲೆ ಮಾಡತಕ್ಕ ರೀತಿ ಹೀಗೆ' ಎಂದು ಉಪದೇಶ ಕೊಟ್ಟಿರಂತೆ. ಆ ಶಿಷ್ಯ ಖೂನಿ ಮಾಡಿ ಮುಗಿಸಿದ. ಆದರೆ ತನ್ನ ಗುರು ಹೇಳಿದ ಕ್ರಮವನ್ನು ಅನುಸರಿಸದೆ ಬೇರೆ ಯಾವುದೋ ಕ್ರಮ ಅನುಸರಿಸಿದ. ಆ ಗುರು perfectionist, ಕಾರ್ಯ ನಡೆಯಿತೆಂದು ಮಾತ್ರಕ್ಕೆ ಅವನಿಗೆ ತೃಪ್ತಿಯಿಲ್ಲ; ಅದು ವಿಧ್ಯುಕ್ತವಾದ ರೀತಿಯಲ್ಲೇ ನಡೆಯಬೇಕು. ದೇವರನ್ನು ಸುತ್ತುಗಟ್ಟಿದ ಮಾತ್ರಕ್ಕೆ ಪುಣ್ಯ ಬಂದೀತೆ? ಪ್ರದಕ್ಷಿಣಾ ವಿಧಿಯನ್ನು ಅನುಸರಿಸಿಯೇ ಸುತ್ತುಗಟ್ಟಬೇಕು! ಆದ್ದರಿಂದ ಕೇವಲ ಮಾತಿನ ಉಪದೇಶ ಸಾಲದೆಂದು ಆ ಗುರು ತಾನೇ ಒಬ್ಬನನ್ನು ಕೊಂದು 'ಕೊಲ್ಲಬೇಕಾದ್ದು ಹೀಗೆ' ಎಂದು ತೋರಿಸಿಕೊಟ್ಟ. ಕೊಲೆಯಾದವನಿಗೂ ಈ ಗುರು ಶಿಷ್ಯರಿಗೂ ಯಾವ ಬಗೆಯ ಸಂಬಂಧವಾಗಲಿ ಪರಿಚಯವಾಗಲಿ ಇಲ್ಲ. ಅವನು ಇವರ ಮಿತ್ರನೂ ಅಲ್ಲ, ಶತ್ರುವೂ ಅಲ್ಲ- ಕೇವಲ ಪಾಠ ಹೇಳುವುದಕ್ಕಾಗಿ ನಡೆಸಿದ ಪ್ರಯೋಗವೊಂದರಲ್ಲಿ ಪಶು! ಈ ಕೊಲೆಯಲ್ಲಿ ಕಾಮ, ಅದರಿಂದ ಹುಟ್ಟುವ ಕ್ರೋಧ, ಅದರಿಂದ ಹುಟ್ಟವ ಸಮ್ಮೋಹ ಇತ್ಯಾದಿಗಳ ಕಾಟವೇನೂ ಇಲ್ಲ. ಅದೊಂದು ಅಸಹ್ಯ ರೀತಿಯ ನಿಷ್ಕಾಮ ಕರ್ಮ!' (ಪು. ೬೫). ಆಧುನಿಕತೆಯ ವಿಕಾಸಗತಿಯಲ್ಲಿ ಮನುಷ್ಯನ ಆಳದ ಇಂತಹ ಕ್ರೌರ್ಯಲೋಲುಪ ಮುಖದೊಂದಿಗೆ ಇನ್ನೊಂದು ಮುಖವನ್ನು ಅವರು ಅಲ್ಲಗಳೆಯದೆ ಪರಿಚಯಿಸುತ್ತಾರೆ.

''ಆದರೂ ನನಗೆ ಅನೇಕ ವೇಳೆ ಅನ್ನಿಸಿದೆ: ಈ ಜನರಲ್ಲಿ ಸೌಂದರ್ಯಕಾಂಕ್ಷೆ ಬದುಕಿದೆ, ಶಾಂತಿಪ್ರೇಮವೂ ಬದುಕಿದೆ. ಅವರು ಕೈಗಾರಿಕಾ ಕ್ರಾಂತಿಯ ಫಲವಾಗಿ ಕೆರಳಿದ ಹುಚ್ಚಿನಿಂದ ಬಿಡುಗಡೆ ಪಡೆದು ಮತ್ತೆ ಮಾನವೀಯತೆಗೆ ಬೆಲೆಕೊಡುತ್ತಾರೆ, ಎಂದು. ಈ ಯೋಚನೆಯ ಜೊತೆಗೆ ಒಂದು ಶಂಕೆಯೂ ಬರುತ್ತದೆ. 'ಚಾರ್ವಾಕರು (materialists) ಎಂದು ನಾವು ಅಲ್ಲಗಳೆಯುವ ಈ ಜನ ಮೇಲೆ ಹೇಳಿದ 'ಬ್ರಾಹ್ಮೀಸ್ಥಿತಿ'ಗೆ ಬರುವ ಹೊತ್ತಿಗೆ ನಾವು - ಆಧ್ಯಾತ್ಮಿಕ ಜನಾಂಗ ಎಂದು ಬಡಾಯಿ ಕೊಚ್ಚುವ ನಾವು - ಅಸುರೀಸ್ಥಿತಿಯನ್ನು ತಲಪಿರುತ್ತೇವೆಯೇನೊ! ನಾವು ಆ ಕಡೆಗೆ ವೇಗವಾಗಿಯೇ ಸಾಗುತ್ತಿದ್ದೇವೆ!'' (ಪು.೧೮೫) ಎಂದು ಅಮೇರಿಕಾದ ಒಳಗೇ ರೂಪುಗೊಳ್ಳುವ ಇನ್ನೊಂದು ಸಾಧ್ಯತೆಯ-ಶಾಂತಿ, ಪ್ರೇಮ, ಸರಳತೆ ಕಡೆಗೆ ಗಮನ ಸೆಳೆಯುತ್ತಾರೆ.

ಈ ಕೃತಿಯಲ್ಲಿನ 'ನನ್ನ ಯೆಹೂದ್ಯ ಮಿತ್ರರು' ಮತ್ತು ರೆಡ್ ಇಂಡಿಯನ್ನರ ಬಗೆಗಿನ ವಿವರಗಳನ್ನೊಳಗೊಂಡ 'ಬಪಲೋಬಿಲ್ ಮ್ಯೂಸಿಯಂ ಮೌಂಟ್‌ರಷ್‌ಮೋರ್ ಇತ್ಯಾದಿ' ಉಲ್ಲೇಖನೀಯ ಭಾಗಗಳಿವೆ. ರಷ್ಯಾ, ಅಮೇರಿಕಾ, ಇಸ್ರಯೆಲ್ ಮೊದಲಾದೆಡೆಯ ಯೆಹೂದ್ಯರ ಸಂಕಷ್ಟಗಳ ಬಗೆಗೆ ಲೇಖಕರಿಗೆ ಮತ್ತು ಯೆಹೂದ್ಯ ಮಿತ್ರರಾದ ಮಿ. ಸ್ಕಿನರ್ ನಡುವೆ ಮಾತುಕತೆ ಆರಂಭವಾದದ್ದು ಗಂಭೀರ ವಿಚಾರಗಳ ಕಡೆಸಾಗುತ್ತದೆ. ಯುರೋಪಿನಲ್ಲಿ ಯೆಹೂದ್ಯರ ಸ್ಥಿತಿಗತಿಗಳ ಬಗ್ಗೆ ಚರ್ಚೆ ಆರಂಭವಾದದ್ದು, ಯೇಸುವನ್ನು ಶಿಲುಬೆಗೆ ಹಾಕಿಸಿದ್ದ ರೋಮನ್ನರ ಬಗೆಗೆ ಅಪರಾಧ ಭಾವನೆಯಿರದೆ ಯೆಹೂದ್ಯರ ಬಗೆಗಿದ್ದುದರ ಬಗೆಗೆ; ರೋಮ್ ಮೊದಮೊದಲು ಕ್ರೈಸ್ತರಿಗೆ ಚಿತ್ರಹಿಂಸೆ ಕೊಟ್ಟು ಅವರನ್ನು ಕೊಂದು, ಎಲ್ಲ ಮಾಡಿದರೂ ಆಮೇಲೆ ಅದು ಕ್ರೈಸ್ತರ ಕೇಂದ್ರವಾದುದರ ಬಗೆಗೆ; ಕ್ರಿಸ್ತಪೂರ್ವದ ವೈಭವದ ಜೊತೆಗೆ ಆಮೇಲೆ ಇಟಲಿ ದೇಶಕ್ಕೆ ದಾಂತ್ರೆ, ಮೈಕಲೇಂಜಲೋ, ಲಿಯನಾರ್ಡೋಡ ವಿಂಚಿ ಇವರಿಂದ ರೋಮ್‌ಗೆ ದೊರೆತ ದಿವ್ಯ ಪ್ರಭೆಯ ಬಗೆಗೆ ಚರ್ಚೆ ಸಾಗುತ್ತದೆ. ಆ ಪ್ರಭೆಯ ಹಿಂದಿದ್ದ ದಿವ್ಯಪ್ರೇರಕ ಶಕ್ತಿ ಕ್ರೈಸ್ತಮತದ್ದು ಹೇಗೋ ಹಾಗೆ ಒಂದು ಭಾಗ ನಮ್ಮದು - ಯೆಹೂದ್ಯರದೆಂದು - ಎಂದು ಹೇಳಬಹುದಲ್ಲವೆ? ಎಂಬ ಪ್ರಶ್ನೆ ಬಂದಾಗ ರೋಮ್ ಮತ್ತು ಮೋಶೆಯ ಪ್ರಸ್ತಾಪ ಬರುತ್ತದೆ. ಮುಂದೆ ಲೇಖಕರು ಅದನ್ನು ವಿವರಿಸುವ ರೀತಿ ಹೀಗಿದೆ.

..............ಮೋಶೆ, ವ್ಯಾಸ, ಇಬ್ಬರಿಗೂ ತಮ್ಮ ದೇಶದ ಮತ್ತು ಮತಧರ್ಮಗಳ ವಿಷಯದಲ್ಲಿ ಅಮಿತವಾದ ಪ್ರೇಮವಿತ್ತು. ಇಬ್ಬರೂ ಮಹೋನ್ನತರು, ''ದೇವರು ದಶಾಜ್ಞೆಗಳನ್ನು ಮೋಶೆಗೆ ಕೊಟ್ಟ, ಆತ ಅದನ್ನು ಯೆಹೂದ್ಯರಿಗೆ ಕೊಟ್ಟರು'', ಎಂದು ನೀವು ನಂಬುತ್ತೀರಲ್ಲ, ಅದನ್ನು ಯೆಹೂದ್ಯರಲ್ಲದ ನಾವು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತೇವೆ- ಆತನಲ್ಲಿದ್ದ ದೈವೀಶಕ್ತಿ ಆ ಆಜ್ಞೆಗಳನ್ನು ಹೊರಡಿಸಿತು ಎಂದು. ಆದ್ದರಿಂದ ನಮ್ಮ ದೃಷ್ಟಿಯಲ್ಲಿ ಮೋಶೆಯ ಘನತೆ ಹೆಚ್ಚುತ್ತದೆ..... ಇಬ್ಬರಿಗೂ ತಮ್ಮ ಜನರ ವಿಷಯದಲ್ಲಿ ಪ್ರೇಮದ ಜೊತೆಗೆ ಅಸಮಾಧಾನವೂ ಇತ್ತು ಅದನ್ನು ರೋಷ ಎಂದೇ ಕರೆಯಬಹುದೇನೊ, ಯೇಸು Oh faithless and perverse generation! How long shall I be with you! (ಅಯ್ಯೋ! ಈ ವಿಶ್ವಾಸರಹಿತ ಜನ! ಎಷ್ಟು ಹೇಳಿದರೂ ಕೇಳದ ಜನ! ನಾನು ಇವರೊಡನೆ ಇನ್ನೆಷ್ಟು ದಿನ ಇರಲಿ) ಎಂದಾಗ ಆತನ ಮನಸ್ಸಿನಲ್ಲೂ ಇಂಥದೇ ಭಾವವಿದ್ದಿರಬೇಕು. ನಮ್ಮ ವ್ಯಾಸ, ''ಎರಡು ತೋಳುಗಳನ್ನು ಆಕಾಶಕ್ಕೆತ್ತಿ ಕೂಗುತ್ತಿದ್ದೇನೆ: ಧರ್ಮದಿಂದಲೇ ಅರ್ಥ, ಧರ್ಮದಿಂದಲೇ ಕಾಮ ಎಂದು; ಅನುಸರಿಸುವವರು ಗತಿಯಿಲ್ಲ'' ಎಂದು ತಮ್ಮ ನಿರಾಶೆಯನ್ನೂ ಜಿಗುಪ್ಸೆಯನ್ನೂ ಹೊರಗೆಡವಿದರು. ಮೈಕಲೇಂಜಲೋವಿನ 'ಮೋಶೆ'ಯ ಮುಖದಲ್ಲಿ ಇದೇ ಜಿಗುಪ್ಸೆ, ನಿರಾಶೆ, sterneess, ಕಾಣುತ್ತದೆ. ಎಂದು 'ಅದು ನಮ್ಮ ಕೊನೆ ಮೊದಲಿಲ್ಲದ ದೌರ್ಬಲ್ಯ, ಹುಚ್ಚುತನ, ಪಾಶವೀವೃತ್ತಿ, ಇವೆಲ್ಲದರ ಪ್ರಭಾವ, ತಮ್ಮ ರೋಷವನ್ನು ತಡೆಹಿಡಿದು ಲೋಕೋಪಕಾರ ಮಾಡಿದ್ದು ಅವರ ದೊಡ್ಡತನ - ಎಂಬುದಾಗಿ ಚರ್ಚೆಯಿಂದ ಲೇಖಕರು ಮತ್ತು ಯೆಹೂದ್ಯಮಿತ್ರರು ತೀರ್ಮಾನಕ್ಕೆ ಬರುತ್ತಾರೆ.

'ಬಫಲೋ ಬಿಲ್ ಮ್ಯೂಸಿಯಂ, ಮೌಂಟ್ ರಷ್‌ಮೋರ್ ಇತ್ಯಾದಿ' ಈ ಭಾಗದಲ್ಲಿ ರೆಡ್ ಇಂಡಿಯನ್ನರ ಬಗೆಗೆ ವಿವರಗಳಿವೆ. 'ಇಡೀ ಮಾನವ ಜನಾಂಗದ ಹಿತದ ದೃಷ್ಟಿಯಿಂದ ಈ ಕಾಡು ಜನರ ಸಂಸ್ಕೃತಿ ನಾಶವಾಗಿ ಅದರ ಸ್ಥಾನದಲ್ಲಿ ಬಿಳಿಯ ಜನರ ನಾಗರಿಕತೆ ಸ್ಥಾಪಿತವಾದರೆ ನಷ್ಟಕ್ಕೆ ಬದಲಾಗಿ ಕಲ್ಯಾಣವೇ ಅಲ್ಲವೇ?' ಲೇಖಕರು ಈ ವಾದವನ್ನು ಪ್ರಸ್ತಾಪಿಸಿ ಅದನ್ನೊಪ್ಪದೆ 'ತಂತ್ರಜ್ಞಾನವೇ (Technology) ನಾಗರಿಕತೆ ಅದೇ ಸಂಸ್ಕೃತಿ ಎಂದು ನಂಬುವವರಿಗೆ ಇದು ನ್ಯಾಯವಾಗಿಯೇ ಕಾಣುತ್ತದೆ' ಎಂದು ಅಭಿವೃದ್ಧಿಯ ಹೆಸರಿನಲ್ಲಿ ನಡೆದ ಪಾತಕಗಳ ಬಗ್ಗೆ ವ್ಯಾಕುಲದಿಂದ ಬರೆಯುತ್ತಾರೆ. ಕೈಗಾರಿಕೀಕರಣದೊಂದಿಗೆ ನಡೆದ ಅಭಿವೃದ್ಧಿಯ ಒಡಲೊಳಗೇ ವಿನಾಶಕಾರಕ ಬೀಜಗಳು ಅಡಗಿವೆಯೆನ್ನುವ ವಾಸ್ತವವನ್ನು ಯಾವೊಂದು ಶಾಸ್ತ್ರ, ಆಧುನಿಕತೆಯ ಗಂಧಗಾಳಿಯೂ ಗೊತ್ತಿಲ್ಲದ ರೆಡ್‌ಇಂಡಿಯನ್ ನಾಯಕ 'ಸಿಯಾತಲ್' ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಫ್ರಾಂಕ್ಲಿನ್ ಪಿಯರ್ಸ್‌ಗೆ ಬರೆಯಿಸಿದ ಪತ್ರದಿಂದ ನಮಗೆ ವಿಶದವಾಗುತ್ತದೆ - ಸಂದರ್ಭ 'ಸಿಯಾತಲ್'ಗೆ ಅಧ್ಯಕ್ಷರು 'ನಿಮ್ಮ ಬಣಕ್ಕೆ ಸೇರಿರುವ ಜಮೀನನ್ನು ನಮಗೆ ಖರೀದಿಗೆ ಕೊಡಿ' ಎಂದು ಕೇಳಿದಾಗ. ಮೂರ್ತಿರಾಯರು ಪತ್ರದ ಮುಖ್ಯ ಭಾಗಗಳನ್ನು ಅನುವಾದಿಸಿ ಈ ಕೃತಿಯಲ್ಲಿ ಕೊಟ್ಟಿದ್ದಾರೆ. ಆ ಪತ್ರದಲ್ಲಿನ ಉತ್ತರದಲ್ಲಿ ಲೇಖಕರು ವಿವರಿಸಿರುವಂತೆ 'ಎದ್ದು ತೋರುವ ಆತ್ಮಗೌರವ, ದ್ವೇಷಕ್ಕಾಗಲಿ, ಗೋಳು ಕರೆಗಾಗಲಿ ಇಳಿಯದೆ ಅಪ್ರಿಯ ಸತ್ಯವನ್ನು ಕಂಡು ಕಾಣಿಸುವ ಆತ್ಮವಂತಿಕೆ, ಭವಿಷ್ಯ ದೃಷ್ಟಿ, ಆಡಂಬರವಿಲ್ಲದ ಕವಿ ಸಹಜವಾದ ಮನೋವೃತ್ತಿ'ಯಿದೆ.

''ಅಂತರಿಕ್ಷವನ್ನು ಭೂಮಿ ತಾಯಿಯ ಮಡಿಲ ಸುಖೋಷ್ಣವನ್ನು ಮಾರುವುದು ಹೇಗೆ? ಈ ಯೋಚನೆಯೇ ನಮಗೆ ವಿಚಿತ್ರವಾಗಿ ಕಾಣುತ್ತದೆ. ಗಾಳಿಯ ಆಪ್ಯಾಯನ ಮೇಲಾಗಲಿ ನೀರಿನ ಚಂಚಲ ಕಾಂತಿಯ ಮೇಲಾಗಲಿ ನಾವಿನ್ನೂ ಒಡೆತನವನ್ನು ಸಂಪಾದಿಸಿಲ್ಲ! ಅದನ್ನು ನಮ್ಮಿಂದ ಹೇಗೆ ತಾನೆ ಕೊಂಡೀರಿ? ಈ ನೆಲದ ಪ್ರತಿ ಅಂಗುಲವೂ ನನ್ನ ಜನಕ್ಕೆ ಪವಿತ್ರವೆಂದು ವಿವರಿಸುವ 'ಸಿಯಾತಲ್' ಆಧುನಿಕ ಮನುಷ್ಯನ ವಿನಾಶ ಗುಣವನ್ನು ಅವನು ಭೂಮಿ, ಆಕಾಶ, ನೀರನ್ನು ಮಲಿನಗೊಳಿಸುವುದನ್ನು ಪ್ರಸ್ತಾಪಿಸುತ್ತಾನೆ. ಇದನ್ನು ಈ ಕೃತಿಯಲ್ಲಿ ಪೂರ್ತಿಯಾಗಿ ಓದಿಯೇ ಅರಿಯಬೇಕು.

ವೈಭವೋಪೇತ ಅಮೆರಿಕಾದಲ್ಲಿಯೇ ಹುಟ್ಟಿದ 'ಥೋರೋ' ಮತ್ತವನ ಸರಳತೆಯ ಆದರ್ಶ ಹಾಗೂ ಅವನ ಪ್ರಖ್ಯಾತ ಗ್ರಂಥ 'ವಾಲ್ಡನ್' ವಿವರಿಸುವ ಸಾತ್ವಿಕ ಬದುಕಿನ ಸಂದೇಶಗಳ ನಡುವೆ ವಾಸ್ತವದ ವಿಲಾಸಲೋಲುಪತೆಯಿಂದ, ಆಧುನಿಕತೆಯ ಅತಿರೇಕದಿಂದ ಓಲಾಡುವ ಅಮೆರಿಕಾವನ್ನು ಭಾರತೀಯ ಹಿನ್ನೆಲೆಯ ಲೇಖಕರು ಚಿತ್ರಿಸುತ್ತ ಎರಡೂ ದೇಶಗಳ ಸಾಂಸ್ಕೃತಿಕ ದ್ವಂದ್ವಗಳನ್ನು ವೈಶಿಷ್ಟ್ಯಗಳನ್ನು ಸಹ ಅರ್ಥೈಸಲು ಯತ್ನಿಸುವ ಈ ಕೃತಿಯು ಅಪೂರ್ವ ರೀತಿಯ ಪ್ರವಾಸ ಕಥನವಾಗಿದೆ.

ದೇವರು

ಡಿ.ವಿ.ಜಿಯವರ 'ದೇವರು' ಎನ್ನುವ ಕಿರುಹೊತ್ತಿಗೆಯಿಂದ ಪ್ರೇರಿತರಾಗಿ ರಚಿಸಿದ ಕೃತಿಯಿದಾಗಿದೆ. ಜಗತ್ತಿನಲ್ಲಿ ದೇವರ ಅಸ್ತಿತ್ವದ ಕುರಿತಾದ ನಂಬಿಕೆಗಳು, ಆಚರಣೆಗಳನ್ನು ವಿಶ್ಲೇಷಿಸುತ್ತಲೇ ಅಪ್ಪಟ ಮಾನವೀಯ ಕಲ್ಪನೆಯ ಸಾಕಾರ ರೂಪದ ದೇವರ ಕಲ್ಪನೆಯನ್ನು ವಿವರಿಸುತ್ತಾರೆ. ''ಈ ದೇವರು ಪ್ರೇಮದ ಸಾಕಾರ ಮೂರ್ತಿ - ಪ್ರೇಮವೇ ದೇವರು. ನಮ್ಮನ್ನು ಸಲಹುವುದಕ್ಕೆ ಅವನು ತಾನೇ ಓಡಿ ಬರುತ್ತಾನೆ. ಪಾಪಿಗಳನ್ನು ಕೂಡ (ಅವರು ಪಶ್ಚಾತ್ತಾಪ ಪಟ್ಟರೆ) ಅಪ್ಪಿಕೊಂಡು ಮುತ್ತಿಟ್ಟು ಬರಮಾಡಿಕೊಳ್ಳುತ್ತಾನೆ. ಇದುವರೆಗೆ ನಾವು ಪರಿಶೀಲಿಸಿದ ಎಲ್ಲ ಕಲ್ಪನೆಗಳಿಗಿಂತ ಶ್ರೇಷ್ಠವಾದ ಕಲ್ಪನೆ ಇದು. ಇಂಥವನು ನಮಗೆ ಬೇಕಾದ ದೇವರು.''

ಮನುಷ್ಯನಿಗೆ ದೇವರನ್ನು ಕಲ್ಪಿಸಿಕೊಳ್ಳಲು ಇದ್ದಿರಬಹುದಾದ ಪ್ರೇರಣೆಗಳು, ಜಗತ್ತಿನ ಕೇಡು, ಸಂಕಟ ಮತ್ತು ದುಷ್ಟತನದ ಹಿಂದಿರುವ ಮನುಷ್ಯನ ಮನಸ್ಸು, ಸ್ವಭಾವ ವೈಚಿತ್ರ್ಯಗಳು, ವೈರುಧ್ಯಗಳನ್ನು ವಿವರಿಸುತ್ತಾ ಇವುಗಳಿಗೆ ಮನುಷ್ಯನಲ್ಲಿಯೇ ಕಾರಣ ಹುಡುಕುತ್ತಾರೆ. ''ಮನುಕುಲಕ್ಕೆ ನನ್ನಂಥ ನಿರೀಶ್ವರವಾದಿಗಳೂ ಸೇರಿದಂತೆ ಮನುಕುಲಕ್ಕೆ ಕರುಣಾದ್ರಕ ಹೃದಯನೂ ಪ್ರೇಮ ಸ್ವರೂಪಿಯೂ ಆದ ದೇವರು ಬೇಕು. ನಾನು 'ದೇವರು ಇಲ್ಲ' ಎಂದು ಕೊಳ್ಳುವಾಗ ನನ್ನ ಮನಸ್ಸಿನಲ್ಲಿರುವುದು ಸಂತೋಷವಲ್ಲ; 'ನಾನು ಸಂಪ್ರದಾಯದ ಗುಲಾಮನಲ್ಲ, ವಿಚಾರವಾದಿ' ಎಂಬ ಹೆಮ್ಮೆಯಲ್ಲ, ನಂಬುವವರನ್ನು ಹೀಯಾಳಿಸಬೇಕೆಂಬ ಆಪೇಕ್ಷೆಯಂತೂ ಖಂಡಿತ ಅಲ್ಲ. 'ದೇವರು ಇಲ್ಲವಲ್ಲ' ಎಂಬ ವಿಷಾದ.... ಜೀವ ಕೋಟಿಯ ಸಂಕಟವನ್ನು ಪರಿಹರಿಸಬಲ್ಲ ದೇವರು ಅಂಥ ದೇವರಿದ್ದರೆ ಯಾರು ' ಬೇಡ' ಎನ್ನುತ್ತಾರೆ! ದೇವರು ಬೇಕು, ಆದರೆ ಅವನಿಲ್ಲ! ಇದು ನಮ್ಮ ಕರುಣಾಜನಕ ಐರನಿಖ' ಎಂದು ದೇವರ ಅಸ್ತಿತ್ವವನ್ನು ವಿಷಾದದಿಂದ ನಿರಾಕರಿಸುತ್ತಾರೆ.

ಈ ಕೃತಿಯಲ್ಲಿ ಪ್ರತಿಪಾದಿತವಾಗಿರುವ ನಿರೀಶ್ವರವಾದ, ಅದಕ್ಕೆ ಪೂರಕವಾಗಿ ಮತಧರ್ಮಗಳಿಂದ ನೀಡುವ ಆಧಾರಗಳ ಸಮೇತ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಈಗಾಗಲೇ ನಾಸ್ತಿಕವಾದವು ಪ್ರತಿಪಾದಿತಗೊಂಡು ಪರಿಚಿತವಾದ ವಿಚಾರಧಾರೆಯಾಗಿದ್ದರೂ ಲೇಖಕರ ಅಂತಃಕರಣ, ಪ್ರೀತಿ ಮತ್ತು ವರ್ತಮಾನದ ವ್ಯವಸ್ಥೆಯ ಛಿದ್ರತೆಗಳಿಗೆ ಪ್ರತಿಕ್ರಿಯಿಸುವ ಕಳಕಳಿಯಿಂದಾಗಿ ಈಕೃತಿ ಓದುಗರಿಗೆ ತೆರೆದುಕೊಳ್ಳುತ್ತದೆ. ಡಾ. ರಹಮತ್ ತರೀಕೆರೆಯವರು 'ದೇವರು'ಕೃತಿಯ ಒಟ್ಟು ಆಶಯವನ್ನು ಹೀಗೆ ವಿವರಿಸುತ್ತಾರೆ.

''ಜೀವನ ಶ್ರದ್ಧೆಯುಳ್ಳ ಆಸ್ತಿಕ ಪಾತ್ರಗಳನ್ನು ಕಾರಂತರು ಗೌರವದಿಂದ ಚಿತ್ರಿಸುವಂತೆ ಮೂರ್ತಿರಾಯರೂ ಚಿತ್ರಿಸುತ್ತಾರೆ. ಆದರೆ, ಇದು ಅಪವಾದವಾಗಿ ಮಾತ್ರ, ಧರ್ಮ ದೇವರುಗಳು ಈ ಜಗತ್ತಿನಲ್ಲಿ ನಡೆಸಿರುವ ಅನಾಹುತಗಳು ಅವರನ್ನು ತೀವ್ರವಾಗಿ ಕಲಕಿವೆ. ಎಂತಲೇ ಅಯೋಧ್ಯೆಯ ಪ್ರಕರಣವನ್ನು ಒಳಗೊಂಡಂತೆ ಮತೀಯವಾದವು

ಇಲ್ಲಿ ನಿಷ್ಠುರವಾದ ವಿಮರ್ಶೆಗೊಳಪಟ್ಟಿದೆ. ದೈವ ನಂಬುಗೆಯಿಲ್ಲದೆಯೂ ಮನುಷ್ಯ ಸಮಾನತೆಯಲ್ಲಿ ಬದುಕಬಹುದಾದ ಪರ್ಯಾಯವೊಂದನ್ನು, ಅರಸುವುದು ಇಲ್ಲಿನ ಪ್ರಧಾನ ಕಾಳಜಿಯಾಗಿದೆ. ಧರ್ಮದ ಆಸರೆಯಿಲ್ಲದೆಯೇ ಮೌಲ್ಯಗಳಲ್ಲಿ ಶ್ರದ್ಧೆಯಿಡುವ ನೈತಿಕ ವಾತಾವರಣ ಸೃಷ್ಟಿಯಾಗಬೇಕೆಂಬುದು ಇಲ್ಲಿನ ಹಂಬಲವಾಗಿದೆ; 'ಕೆಟ್ಟದು' 'ಅದು ಕೆಟ್ಟದು' ಎಂಬ ಕಾರಣಕ್ಕಾಗಿಯೇ ಬೇಡವಾಗುವಂತಹ ಒಳ್ಳೆಯದು 'ಇದು ಒಳ್ಳೆಯದು' ಎಂಬ ಕಾರಣಕ್ಕಾಗಿಯೇ ಪ್ರೀತಿಸುವಂತಹ ಮನೋಧರ್ಮ ನಿರ್ಮಾಣವಾಗುವುದನ್ನು ಮೂರ್ತಿರಾಯರು ಆಶಿಸುತ್ತಾರೆ''- (ಪುಸ್ತಕ ಮಾಹಿತಿ, ಮೇ ೧೯೯೪- ಕನ್ನಡ ವಿಶ್ವ ವಿದ್ಯಾಲಯ)

'ದೇವರು' ಕೃತಿಗೆ ೧೯೯೩ನೇ ಸಾಲಿನ 'ಪಂಪ ಪ್ರಶಸ್ತಿ' ದೊರೆತಿದೆ.

ಸಂಜೆಗಣ್ಣಿನ ಹಿನ್ನೋಟ

೧೯೯೦ರಲ್ಲಿ ಪ್ರಕಟಗೊಂಡ ಈ ಕೃತಿಯು ಮೂರ್ತಿರಾಯರ ಆತ್ಮಕಥೆಯಾಗಿದೆ. 'ಇದನ್ನು ಆತ್ಮಕಥೆ ಎಂದು ಕರೆಯಬಹುದು. ಆದರೂ ಇದರ ಮುಖ್ಯವಸ್ತು 'ನಾನು ಬದುಕಿನಲ್ಲಿ ಏನು ಮಾಡಿದೆ' ಎಂಬುದಲ್ಲ. ಬದುಕು ನನ್ನ ಕಣ್ಣಿಗೆ ಹೇಗೆ ಕಂಡಿತು; ನನ್ನೆದುರಿಗೆ ಕಾಲದಿಂದ ಕಾಲಕ್ಕೆ ಪರಿಸ್ಥಿತಿ ಹೇಗೆ ಬದಲಾಯಿಸಿತು; ಸಂಪ್ರದಾಯವೂ ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸವೂ ನನ್ನ ಮೇಲೆ ಉಂಟುಮಾಡಿದ ಪರಿಣಾಮವೇನು; ಬಂಧುಗಳು, ಮಿತ್ರರು, ಗುರುಗಳು, ನನ್ನ ಮೇಲೆ ಬೀರಿದ ಪ್ರಭಾವ - ಇದನ್ನೆಲ್ಲ ಕಾಣಿಸುವುದು ನನ್ನ ಮುಖ್ಯೋದ್ದೇಶ. ಈ ಉದ್ದೇಶಕ್ಕೆ ಚೌಕಟ್ಟಾಗಿ ಆತ್ಮಕಥೆ ಬಂದಿದೆ ಎಂದು ಮುನ್ನುಡಿಯಲ್ಲಿ ವಿವರಿಸಿದ್ದಾರೆ.

೧೯೦೦ರಲ್ಲಿ ಜನಿಸಿದ ಮೂರ್ತಿರಾಯರು ವಸಾಹತುಶಾಹಿಯ ಪರಿಣಾಮ, ರಾಷ್ಟ್ರೀಯತಾವಾದ, ಸ್ವಾತಂತ್ರ್ಯ ಚಳುವಳಿ ಮೊದಲಾದ ಪರಿವರ್ತನೆಗಳನ್ನು ಕಾಲದಿಂದ ಕಾಲಕ್ಕೆ ಗುರುತಿಸುವ, ಅರ್ಥೈಸುವ ರೀತಿಯು ವಿಶಿಷ್ಟವಾಗಿದೆ. ಒಂದು ಶತಮಾನದ ಮುಖ್ಯ ಘಟನೆಗಳನ್ನು, ಸಾಂಸ್ಕೃತಿಕ ಬದುಕಿನ ಅವಸ್ಥಾಂರಗಳನ್ನು, ಆತಂಕಗಳನ್ನು ಈ ಕೃತಿಯಲ್ಲಿ ದಾಖಲಿಸುತ್ತಾರೆ. ದೀರ್ಘಕಾಲದ ಸಂವೇದನಾಶೀಲ ಬದುಕೊಂದು ಜೀವನದಿಂದ ಪಡೆದ ಅಪಾರ ತಿಳಿವು, ಆ ತಿಳಿವಿನಿಂದಾಗಿ ಸಾವು, ನೋವುಗಳೆಲ್ಲವನ್ನೂ ಮೀರಿ ಹುಟ್ಟುವ ಮತ್ತು ಬದುಕನ್ನು ಅರ್ಥವತ್ತಾಗಿಸುವ ದಾರ್ಶನಿಕ ನಿಲುವು ಈಕೃತಿಯ ಒಳಸ್ವರೂಪವಾಗಿದೆ. ನಿದರ್ಶನಕ್ಕೆ ಈ ಕೃತಿಯ ಕೆಲವು ಸಾಲುಗಳನ್ನು (ಪು. ೪೨೬) ಉದಾಹರಿಸಬಹುದು.

''ಇಂಥವರು ಸತ್ತಾಗ ಕಲ್ಯಾಣಕಾರಕವಾದ ಸತ್ವವೊಂದು ಇಲ್ಲವಾಯಿತು ಎನ್ನಿಸುತ್ತದೆ. ಆ ಭಾವನೆಯಲ್ಲಿ ಎರಡು ಅಂಶಗಳನ್ನು ಗುರುತಿಸಬಹುದು: ಅವರಲ್ಲಿದ್ದ ಮಾನವ ದಯಾಮೃತವನ್ನು ನೆನೆಯುವುದೇ ಒಂದು ಬಗೆಯ 'ಸುಖ'- ಸಾವಿನ ಸಂದರ್ಭದಲ್ಲಿ ಆ ಪದವನ್ನು ಬಳಸಬಹುದಾದರೆ! ಅಂಥ ಮಾನವ ಪ್ರೇಮ ಇಲ್ಲವಾಯಿತಲ್ಲ ಎಂಬ ದುಃಖ. ನಮ್ಮ ಅನುಭವ ಈ 'ಸುಖ' 'ದುಃಖ'ಗಳ ಮಿಲನ.

ದುಃಖವು ಸುಖಕ್ಕೆ ಒಂದು ಬಗೆಯ ಆಲೋಚನಾಪೂರ್ಣವಾದ ಗಾಂಭೀರ್ಯವನ್ನು ಕೊಡುತ್ತದೆ; 'ಸುಖ'ವು ದುಃಖದ ಉಬ್ಬರವನ್ನು ತಗ್ಗಿಸಿ ಸಹ್ಯವಾಗಿಸುತ್ತದೆ. ನನ್ನ ಈ ಅನುಭವಕ್ಕೆ ಮಾತಿನಲ್ಲಿ ಅಭಿವ್ಯಕ್ತಿ ಕೊಡುವುದು ಕಷ್ಟ ಎನ್ನಿಸುತ್ತದೆ''

ಅನುವಾದ, ವಿಮರ್ಶೆ, ಇತ್ಯಾದಿ

ಸಾಕ್ರೆಟೀಸನ ಕೊನೆಯ ದಿನಗಳು

ಪ್ಲೇಟೋನ 'ENTHYPHRO', 'CRITO', 'APOLOGY', 'PHAEDO' ಎಂಬ ಸಂವಾದಗಳ ಅನುವಾದವಾಗಿದ್ದು ಲೇಖಕರು ವಿಶೇಷ ಪರಿಶ್ರಮದಿಂದ ರಚಿಸಿದ ಅವತರಣಿಕೆಯು ಉಪಯುಕ್ತವಾಗಿದೆ. ಇದರಿಂದಾಗಿ ನಮಗೆ ಸಾಕ್ರೆಟೀಸನ ಬಗೆಗಷ್ಟೇ ಅಲ್ಲದೆ ಸಮಕಾಲೀನ ಗ್ರೀಕ್‌ನ ತತ್ವಚಿಂತನೆ, ಧಾರ್ಮಿಕ ವಿಷಯಗಳು ಮತ್ತು ಚಿಂತಕರ ಬಗೆಗೆ ವಿವರಗಳು ದೊರೆಯುತ್ತವೆ. ಲೇಖಕರ ವಿದ್ವತ್ತು, ತಾತ್ವಿಕ-ಜಿಜ್ಞಾಸೆ ಮತ್ತು ಪರಿಶ್ರಮಗಳಿಂದಾಗಿ ಈ ಅವತರಣಿಕೆಯು ಉತ್ತಮ ಪ್ರಬಂಧದ ರಚನೆ ಪಡೆದುಕೊಂಡಿದೆ. ಸಾಕ್ರೆಟೀಸನ ಜೀವನ ಧ್ಯೇಯವನ್ನು ಮೂರ್ತಿರಾಯರು ''ಸಕಲ ವಿಷಯ ವಿಮರ್ಶೆ, ಅದರ ಮೂಲಕ ನಿಷ್ಕೃಷ್ಟವಾದ ಜ್ಞಾನಾರ್ಜನೆ ಅದರ ಮೂಲಕ ಉತ್ತಮ ಜೀವನ ಸಾಧನೆ- ಇದೇ ಸಾಕ್ರೆಟೀಸನ ಜೀವನಧ್ಯೇಯ'' ಎಂಬುದಾಗಿ ಅವನ ಬದುಕಿಗಿದ್ದ ಉದ್ದೇಶವನ್ನು ವಿವರಿಸುತ್ತಾರೆ. 'ಗ್ರೀಕರ ಅತ್ಯುತ್ತಮ ಕಲೆಯಲ್ಲಿ ಅವರ ನಾಟಕಗಳಲ್ಲಿ, ಪ್ರತಿಮೆಗಳಲ್ಲಿ, ವಾಸ್ತುಶಿಲ್ಪದಲ್ಲಿ ಕಂಡುಬರುವ ಪರಿಪೂರ್ಣತೆಯೂ ಸರ್ವಾಂಶಗಳ ಉಚಿತ ಪ್ರಮಾಣವೂ ಸಾಕ್ರೇಟೀಸಿನಲ್ಲಿಯೂ ಕಂಡುಬರುತ್ತವೆ. ಆತನು ಬುದ್ಧ, ಕ್ರಿಸ್ತ ಮೊದಲಾದ ಜಗತ್ತಿನ ಮಹಾಪುರುಷರಲ್ಲೊಬ್ಬನು'' ಎಂಬುದಾಗಿ ಈ ಅವತರಣಿಕೆಯಲ್ಲಿ ವಿವರಿಸುತ್ತಾರೆ.

ಸಾಹಿತ್ಯ ಮತ್ತು ಸತ್ಯ ಹಾಗೂ ವಿಮರ್ಶಾತ್ಮಕ ಪ್ರಬಂಧಗಳು

ಸಾಹಿತ್ಯತತ್ವ ಮತ್ತು ವಿಮರ್ಶೆಗೆ ಸಂಬಂಧಪಟ್ಟವಾಗಿದ್ದು ಇವು ಲೇಖಕರ ಅತ್ಯುತ್ತಮ ವಿಮರ್ಶನ ಪ್ರಜ್ಞೆ, ಮತ್ತವರ ಓದಿನ ವ್ಯಾಪ್ತಿಯನ್ನು ತೋರಿಸುತ್ತವೆ. 'ಸಾಹಿತ್ಯ ಮತ್ತು ಸತ್ಯ' ಸಂಕಲನದಲ್ಲಿನ ಅದೇ ಹೆಸರಿನ ಲೇಖನವು, ಇತಿಹಾಸ, ವಿಜ್ಞಾನ ಹೇಳುವ ಸತ್ಯದ ಸ್ವರೂಪಕ್ಕೂ ಸಾಹಿತ್ಯದಲ್ಲಿ ಕಲೆಯಾಗಿ ನಿರೂಪಿತವಾಗುವ ಸತ್ಯದ ಸ್ವರೂಪಕ್ಕೂ ಇರುವ ಅಂತರ್‌ಸಂಬಂಧಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತದೆ.

''ಗೇಯಕಾರ ಹೇಗೋ ಕವಿಯೂ ಹಾಗೇ ಭಾವ ಪ್ರಧಾನವಾದ ಒಂದು ದೃಷ್ಟಿಯಿಂದ ಪ್ರಚೋದಿತನಾಗಿ ಅದಕ್ಕೆ ಅಭಿವ್ಯಕ್ತಿ ಕೊಡುವ ಕೃತಿಯನ್ನು ರಚಿಸಹೊರಡುತ್ತಾನೆ. ತನಗೆ ಹೊಳೆದ ದೃಷ್ಟಿ ಇತರರಿಗೂ ಹೊಳೆಯುವಂತೆ, ಅದೇ ಭಾವ ಅವರಲ್ಲೂ ಎಚ್ಚರಗೊಳ್ಳುವಂತೆ, ಹೊರ ಪ್ರಪಂಚದ ತಥ್ಯಗಳನ್ನು ಒಂದು ಸಂದರ್ಭಕ್ಕೆ ಹೊಂದಿಸಿಕೊಳ್ಳುತ್ತಾನೆ; ಒಂದು ಕ್ರಮಕ್ಕೆ ಒಳಪಡಿಸುತ್ತಾನೆ. ಅದರ ಫಲವಾಗಿ

ಸತ್ಯವೊಂದು ಹೊರಪಡುತ್ತದೆ'' ಎಂಬುದಾಗಿ ಕಲೆಯಲ್ಲಿ ವ್ಯಕ್ತಗೊಳ್ಳುವ ಸತ್ಯವನ್ನು ನಿರೂಪಿಸುತ್ತಾರೆ.

'ವಿಮರ್ಶಾತ್ಮಕ ಪ್ರಬಂಧಗಳು' ಶೀರ್ಷಿಕೆಯ ಸಂಕಲನದಲ್ಲಿ ಈಗಾಗಲೇ ಸಂಕಲಿತಗೊಂಡ ಸಂಕಲನಗಳಲ್ಲಿ ಲಲಿತ ಪ್ರಬಂಧಗಳ ಬಂಧದಿಂದ ಬೇರೆಯಾದ ವಿಮರ್ಶಾತ್ಮಕವಾದವುಗಳನ್ನು ಆಯ್ದು ಸಂಗ್ರಹಿಸಿದವುಗಳಾಗಿವೆ. ಇದರಲ್ಲಿನ 'ಕನ್ನಡ ನಾಡಿನಲ್ಲಿ ಷೇಕ್ಸ್‌ಪಿಯರ್‌ನ ನಾಟಕಗಳು' ಮತ್ತು 'ಷೇಕ್ಸ್‌ಪಿಯರ್‌ನ ರಾಜಕೀಯ ದೃಷ್ಟಿ' ಇವು ಷೇಕ್ಸ್‌ಪಿಯರ್‌ನ ಬಗ್ಗೆ ಕನ್ನಡದಲ್ಲಿ ಅಧಿಕೃತ ಮಾಹಿತಿ ನೀಡಬಲ್ಲ ಬರಹಗಳಾಗಿವೆ.

ಇದಲ್ಲದೆ ಮೋಲಿಯೇರ್‌ನ 'ತಾರ್ತುಫ್' ನಾಟಕದ ರೂಪಾಂತರ 'ಆಷಾಢಭೂತಿ' ಯು ಹಲವು ಯಶಸ್ವಿ ಪ್ರದರ್ಶನಗಳನ್ನು ಕಂಡ ನಾಟಕವಾಗಿದೆ. ಷೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕವನ್ನು 'ಚಂಡಮಾರುತ'ವಾಗಿ ಅನುವಾದಿಸಿದ್ದಾರೆ. 'ಪಾಶ್ಚಾತ್ಯ ಸಣ್ಣಕಥೆಗಳು', 'ಯೋಧನ ಪುನರಾಗಮನ' ಈ ಸಂಕಲನಗಳು ಪಶ್ಚಿಮದ ಶ್ರೇಷ್ಠ ಸಣ್ಣಕಥೆಗಳ ಅನುವಾದಗಳಾಗಿವೆ. ಇಷ್ಟಲ್ಲದೆ ಶಿವರಾಮಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು 'The Return to the soil' ಎಂಬ ಹೆಸರಿನಿಂದ ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಬಿ.ಎಂ.ಶ್ರೀಯವರನ್ನು ಕುರಿತು ಇಂಗ್ಲಿಷಿನಲ್ಲಿ ಕಿರುಹೊತ್ತಿಗೆಯೊಂದನ್ನು ರಚಿಸಿದ್ದಾರೆ.

ವಿಮರ್ಶೆಗಳ ಸಂಗ್ರಹ

ಜಿ.ಎಸ್. ಶಿವರುದ್ರಪ್ಪ

ಜಿ.ಎಸ್.ಎಸ್. ಅವರು ಮೂರ್ತಿರಾಯರ ಬರಹಗಳು ಕಥೆ ಕಾದಂಬರಿ ಕವಿತೆಯಂಥ ತೀವ್ರ ಸೃಜನಾತ್ಮಕ ಬರಹಗಳಿಂದ ಭಿನ್ನವಾದುದು ಎಂದು ಗುರುತಿಸುತ್ತಾರೆ. 'ಮೂರ್ತಿರಾಯರು ತಮ್ಮ ಬರಹಗಳನ್ನು ಆರಂಭಮಾಡಿದ್ದೇ ನವೋದಯದ ಸಂಭ್ರಮಾನ್ವಿತವಾದ ಸಾಹಿತ್ಯಿಕ ಪರಿಸರದೊಳಗೆ' ಎಂದೂ ಗುರುತಿಸುವ ಅವರು ಮೂರ್ತಿರಾಯರ ಕೃತಿಗಳ ಬಗೆಗೆ ವಿಶೇಷ ಚರ್ಚೆ, ವಿಶ್ಲೇಷಣೆ ನಡೆದಿಲ್ಲವೆಂಬುದನ್ನು ಪ್ರಸ್ತಾಪಿಸುತ್ತಾರೆ. ''ಕಳೆದ ದಶಕದಲ್ಲಿ ನಡೆದು ಬಂದ ದಾರಿಯಂಥಾ ಏಕಾಂಗ ಸಾಹಸಿಕ ವಿಮರ್ಶೆಯ ಸಂಪುಟವನ್ನು ಪ್ರಕಟಿಸಿದ ಕುರ್ತಕೋಟಿಯವರು ಕೂಡ ಕನ್ನಡ ಪ್ರಬಂಧ ಸಂದ ಬಗೆಯಾಗಲೀ ಮೂರ್ತಿರಾಯರ ಬಗ್ಗೆ ಏನಾದರೂ ಕುರಿತು ಹೇಳಿದ್ದು ನನಗೆ ಕಾಣಿಸಲಿಲ್ಲ. ಕಾವ್ಯವನ್ನು ಕುರಿತು ಸಾಹಿತ್ಯದ ಇತರ ಪ್ರಕಾರಗಳನ್ನು ಕುರಿತು ಒಂದು ಹಂತದಲ್ಲಿ ಒಂದು ಮಟ್ಟದಲ್ಲಿ ವಿಮರ್ಶೆ ಮಾಡಿದಂಥ ಕುರ್ತಕೋಟಿಯವರು ನಮ್ಮ ಪ್ರಬಂಧಕಾರರ ಕೊಡುಗೆ ಏನು ಎಂಬುದನ್ನು ಯೋಚನೆ ಮಾಡಲಿಲ್ಲ ಎಂಬುದು ವಿಶೇಷವಾಗಿ ಆಶ್ಚರ್ಯದ ಸಂಗತಿಯಾಗಿ ತೋರುತ್ತದೆ'' ಎನ್ನುವ ಅವರು ಮುಂದುವರಿದು 'ನವೋದಯ ಪರಿಸರದಲ್ಲಿ ಕೂಡ ಮೂರ್ತಿರಾಯರು ಕವಿತೆಯ ಸೆಳೆತದಿಂದ ಪಾರಾಗಿ ಬೇರೊಂದು ತಮ್ಮ ಸ್ವಧರ್ಮಕ್ಕೆ ಒಗ್ಗುವ ಸಾಹಿತ್ಯದ ವಲಯವನ್ನು ಆರಿಸಿಕೊಂಡದ್ದು ಬಹಳ ವಿಶೇಷವಾದ ಸಂಗತಿ' ಎನ್ನುತ್ತಾರೆ.

'ಮೂರ್ತಿರಾಯರೊಂದಿಗೆ ಮುಖ್ಯವಾಗಿ ಏ.ಸೀ. ತೀನಂಶ್ರೀ, ಗೊರೂರು. ರಾ.ಕು, ದ.ಬಾ.ಕುಲಕರ್ಣಿ, ಧಾರವಾಡಕರ ಇಂಥ ಅನೇಕರು ಪ್ರಬಂಧಗಳನ್ನು ಬರೆದಿದ್ದಾರೆ. ಆದರೆ ಮೂರ್ತಿರಾಯರು ಮಾತ್ರ ಈ ಪ್ರಬಂಧ ಸಾಹಿತ್ಯಕ್ಕೆ ಬಹಳ ಪ್ರಮುಖವಾದ ಮತ್ತು ವಿಶಿಷ್ಟವಾದ ಕೊಡುಗೆ ಎಂದು ನಾನು ತಿಳಿದುಕೊಂಡಿದ್ದೇನೆ' ಎನ್ನುವ ಜಿ.ಎಸ್.ಎಸ್. ಅವರು ಮೂರ್ತಿರಾಯರ 'ಪೂರ್ವಸೂರಿಗಳೊಡನೆ' ಎಂಬ ಸಾಹಿತ್ಯ ತತ್ವಕ್ಕೆ ಸಂಬಂಧಿಸಿದ ಪುಸ್ತಕವನ್ನು ಹೆಸರಿಸಿ ''ಅದರಲ್ಲಿ ಮುಖ್ಯವಾಗಿ ಸೀತಾಪರಿತ್ಯಾಗದ ವಿಷಯವನ್ನು ಎತ್ತಿಕೊಂಡು ಉತ್ತರಕಾಂಡದಲ್ಲಿ ಹೇಗಿದೆ? ಭವಭೂತಿಯಲ್ಲಿ ಹೇಗಿದೆ, ಕಾಳಿದಾಸನಲ್ಲಿ ಹೇಗಿದೆ..... ಹೀಗೆ ಅತ್ಯಂತ ತೌಲನಿಕ ವಿಮರ್ಶೆಯಲ್ಲಿ ಅತ್ಯಂತ ಸಮರ್ಥವಾದ ರೀತಿಯಲ್ಲಿ ಯಾವುದೇ ಮಡಿವಂತಿಕೆ ಇಲ್ಲದೆ ಸಂಪ್ರದಾಯಕ್ಕೆ ಕಟ್ಟು ಬೀಳದೆ, ಬಹಳ ನಿರ್ಭಯವಾದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಒಂದು ವೇಳೆ

ಮೂರ್ತಿರಾಯರು ಸಾಹಿತ್ಯ ವಿಮರ್ಶೆಯ ಕ್ಷೇತ್ರವನ್ನು ಪ್ರವೇಶಮಾಡಿ ಹೆಚ್ಚು ಸಾಹಿತ್ಯ ವಿಮರ್ಶೆಯ ಕೆಲಸವನ್ನು ಮಾಡಿದ್ದರೆ ಅದು ಬಹಳ ಮೌಲಿಕವಾದುದಾಗಿರಬಹುದಿತ್ತು. ಹಾಗೆ ಮಾಡಲಿಲ್ಲವಲ್ಲ ಎಂಬ ಕೊರಗು ನನಗೆ ಈಗಲೂ ಇದೆ'' ಎಂದು ಅವರ ವಿಮರ್ಶಕ ಶಕ್ತಿಯ ಬಗೆಗೆ ವಿವರಿಸುತ್ತಾರೆ.

ಮೂರ್ತಿರಾಯರ ಒಟ್ಟಾರೆ ಸಾಹಿತ್ಯದ ವೈಶಿಷ್ಟ್ಯವನ್ನು, ಅವರಿಗಿದ್ದ ಹಿನ್ನೆಲೆಯನ್ನು ಈ ರೀತಿಯಾಗಿ ಹೇಳಿದ್ದಾರೆ: ಈ ಪ್ರಬಂಧಗಳಲ್ಲಿ ಒಂದು ವ್ಯಕ್ತಿತ್ವದ ಪೂರ್ವ ಹಾಗೂ ಪಶ್ಚಿಮಗಳೆರಡರ ಪರಿಣತಿ ಇದೆ. ಅವರ ಅಧ್ಯಯನ ಸಂಸ್ಕೃತ ಕಾವ್ಯಗಳಿಗೆ, ಪಶ್ಚಿಮದ ಮಹಾಕಾವ್ಯಗಳಿಗೆ ಮೀಸಲಾಗಿದೆ. ನಮ್ಮಲ್ಲಿ ಅನೇಕ ಇಂಗ್ಲಿಷ್ ಅಧ್ಯಾಪಕರಿದ್ದಾರೆ. ಆ ಕಾಲದ ಪ್ರೊಫೆಸರ್ ಒಂದು ರೀತಿಯ ಇಷ್ಟರಮಟ್ಟಿಗೆ ಸಂಸ್ಕೃತಿ ಹಿನ್ನೆಲೆಯನ್ನು ಅರಗಿಸಿಕೊಂಡು ತಮ್ಮ ಪರಂಪರೆಯ ಪ್ರಜ್ಞೆಯನ್ನು ವಿಸ್ತಾರ ಮಾಡಿಕೊಂಡು ಬರೆದಿರುವವರು ಕಡಿಮೆ. ಪರಂಪರೆ ಅಂದ್ರೆ ಕೆಲವಕ್ಕೆ ಮಾತ್ರ ಬದ್ಧರಾಗಿರ್ತೇವೆ. ಜೀವಂತರಾಗಿರ್ತೇವೆ. ಸೀಮಿತಾರ್ಥದಲ್ಲಿ ನಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಗಂಟು ಹಾಕಿಕೊಂಡಿರುತ್ತೇವೆ. ಹಾಗಲ್ಲ ಇದು. ಹೀಗಾಗಿ ಮೂರ್ತಿರಾಯರು ಅಂದಿನ ಕಾಲದ ಅನೇಕ ದೊಡ್ಡ ದೊಡ್ಡ ಲೇಖಕರ ಹಾಗೆ ತಮ್ಮ ಅರಿವನ್ನು ಪ್ರಪಂಚದ ಎಲ್ಲಾ ಸಾಹಿತ್ಯ ತಿಳಿವಿನಿಂದ ವಿಸ್ತಾರ ಮಾಡಿಕೊಂಡು ಬೆಳೆದವರು. ಹೀಗಾಗಿ ಅಲ್ಲಿ ವಿದ್ವತ್ತಿದೆ. ಸಂಸ್ಕೃತಿ ಇದೆ. ವಿದ್ವತ್ತು ಸಂಸ್ಕೃತಿ ಇವೆರಡರಿಂದ ಸಮಸಿತವಾದಂಥ ಒಂದು ಪರಿಣತ, ಸಂಸ್ಕೃತ ಚೇತನದ ಅಭಿವ್ಯಕ್ತಿಯಾಗಿ ಅವರ ಸಾಹಿತ್ಯ ಇಂದು ನಮ್ಮ ಮುಂದೆ ಇದೆ.

ಎಲ್.ಎಸ್. ಶೇಷಗಿರಿರಾವ್

ಎಲ್.ಎಸ್.ಎಸ್. ಅವರು ಎರಡು ರೀತಿಯ ಬರಹಗಾರರನ್ನು ಉದಹರಿಸುತ್ತಾರೆ. ಅನ್ಯಾಯ ಹಾಗೂ ಶೋಷಣೆಯಾಗುತ್ತಿರುವ ಕಡೆ ಬೆರಳಿಟ್ಟು ತೋರಿಸಿ ಇದರ ವಿರುದ್ಧ ಓದುವವನು ಸಿಡಿದೇಳುವಂತೆ ಅವನನ್ನು ಪ್ರಚೋದಿಸುವ ಕ್ರಾಂತಿಕಾರಕ ಮನೋಭಾವದ ಬರಹಗಾರರು ಮತ್ತು ಇನ್ನೊಂದು ಬಗೆಯಲ್ಲಿ ಬರಹಗಾರರು ಎಲ್ಲ ಅನ್ಯಾಯಕ್ಕೂ, ಶೋಷಣೆಗೂ ಮರುಗುವಂತೆ ನಮ್ಮ ಭಾವಗಳಿಗೆ ಶಿಕ್ಷಣ ಕೊಡುತ್ತಾರೆ, ನಮ್ಮ ಅಂತಃಕರಣವನ್ನು ವಿಶಾಲಗೊಳಿಸಿ, ಮೃದುಗೊಳಿಸಿ ನಮ್ಮನ್ನು ಮೊದಲಿಗಿಂತ ಉತ್ತಮ ಮನುಷ್ಯರನ್ನಾಗಿ ಮಾಡುತ್ತಾರೆ. ಮೂರ್ತಿರಾಯರು ಈ ಬಗೆಯ ಲೇಖಕರೆಂಬುದಾಗಿ ತಿಳಿಸುತ್ತಾರೆ.

ಮೂರ್ತಿರಾಯರ ಸಮಕಾಲೀನ ಪ್ರಬಂಧಕಾರರ ಪ್ರಬಂಧಗಳಿಗೂ ಮೂರ್ತಿರಾಯರ ಪ್ರಬಂಧಗಳಿಗೂ ಸ್ವರೂಪದಲ್ಲಿ ಇರುವ ಭಿನ್ನತೆಯನ್ನು ಈ ರೀತಿ ಕಾಣಿಸಿದ್ದಾರೆ.

''ಇತರರ ಪ್ರಬಂಧಗಳಿಗೂ ಮೂರ್ತಿರಾಯರ ಪ್ರಾತಿನಿಧಿಕ ಪ್ರಬಂಧಗಳಿಗೂ ಒಂದು ವ್ಯತ್ಯಾಸವಿದೆ. ಇತರ ಪ್ರಬಂಧಗಳು ಒಂದು ಹೊಚ್ಚಹೊಸ ದೃಷ್ಟಿಕೋನವನ್ನು ನಮ್ಮ ಮುಂದಿಟ್ಟು ಅದನ್ನು ಸ್ವಾರಸ್ಯವಾಗಿ ಬಳಸಿಕೊಂಡು ಹೋಗುತ್ತ ''ಹೌದಲ್ಲ,

ಇದು ನನಗೆ ಹೊಳೆದಿರಲಿಲ್ಲ ಆದರೂ ನಿಜ'' ಎನ್ನಿಸುತ್ತವೆ. ನಿರೂಪಣೆಯಲ್ಲಿ ಸೊಗಸಾದ ಹಾಸ್ಯವನ್ನು ಬೆರೆಸಿ ಹೊಳಪನ್ನು ಕೊಡುತ್ತವೆ. ಇವುಗಳಲ್ಲಿ ನಾವು ಮೆಚ್ಚುವುದು ಚಮತ್ಕಾರವನ್ನು, ಬುದ್ಧಿಯ ಲಾಸ್ಯವನ್ನು, ಹಾಸ್ಯವನ್ನು. ಇವುಗಳು ನಮ್ಮ ಭಾವವನ್ನು ಎಚ್ಚರಿಸಿ ಹೊಸ ಅನುಭವವನ್ನು ನೀಡುವುದಿಲ್ಲ. ಇಂತಹ ಪ್ರಬಂಧಗಳಲ್ಲಿ ನಮಗೆ ಮೆಚ್ಚಿಕೆಯಾಗುವುದು ಬುದ್ಧಿಯ ಅಂಶ. ಹಾಸ್ಯ. ಆದರೆ ಯಾವುದೇ 'ನೈತಿಕ'ವಾದ ಅನುಭವವಾಗುವುದಿಲ್ಲ. (ಇಲ್ಲಿ 'ನೈತಿಕ' ಎಂಬ ಶಬ್ದವನ್ನು, ಬಾಳಿನ ಬಗೆಗೆ ಗಾಢವಾಗಿ ಯೋಚನೆ ಮಾಡುವಂತಹ ಅಥವಾ ಸಂಬಂಧ ಆಯ್ಕೆಯನ್ನು ಮಾಡುವಂತಹ ಎನ್ನುವ ಅರ್ಥದಲ್ಲಿ ಬಳಸಿದ್ದೇನೆ). ಮೂರ್ತಿರಾಯರ ಅತ್ಯುತ್ತಮ ಪ್ರಬಂಧಗಳಲ್ಲಿ ಸಾಮಾನ್ಯವಾಗಿ ಅಹಮಿಕೆಯ ಸಂಕುಚಿತ ಜಗತ್ತಿನಿಂದ ವಿಶಾಲವಾದ ಜಗತ್ತಿಗೆ ಪ್ರವೇಶಿಸಿದ ಅನುಭವ ಆಗುತ್ತದೆ. ಒಬ್ಬ ಮನುಷ್ಯನ ಬಾಳಿನಿಂದ ಮನುಷ್ಯ ಕುಲದ ಬಾಳಿಗೆ ಕಾಲಿಟ್ಟಂತೆ, ವಿಶಾಲ ವಿಶ್ವಕ್ಕೆ ಪ್ರವೇಶಿಸಿದಂತೆ ಆಗುತ್ತದೆ.'' ಎಂದು ಅವರ ಪ್ರಬಂಧಗಳ ವೈಶಿಷ್ಟ್ಯವನ್ನು ವಿವರಿಸುವ ಎಲ್.ಎಸ್.ಎಸ್. ಅವರು ಮೂರ್ತಿರಾಯರಿಗೆ ಮನುಷ್ಯ ಸ್ವಭಾವದಲ್ಲಿರುವ ಗಾಢವಾದ ಆಸಕ್ತಿಯನ್ನೂ ಸಹ ಗುರುತಿಸುತ್ತಾರೆ. 'ಇವನು ಒಳ್ಳೆಯವನು, ಅವನು ಕೆಟ್ಟವನು, ಇವನನ್ನು ಅನುಸರಿಸಬಹುದು, ಅವನನ್ನು ದೂರ ಇಡತಕ್ಕದ್ದು- ಇಂತಹ ತೀರ್ಮಾನಕ್ಕೆ ಬೇಕಾದ ನೈತಿಕ ಅಳತೆಗೋಲನ್ನು ಬದಿಗಿಟ್ಟು, ಸುತ್ತಲಿನ ಜನರನ್ನು ಅರ್ಥಮಾಡಿಕೊಳ್ಳುವುದೇ ಒಂದು ಕುತೂಹಲಕರವಾದ ಮತ್ತು ಉಪಯುಕ್ತವಾದ ಪ್ರಯತ್ನ. ಮನುಷ್ಯ ಸ್ವಭಾವದಲ್ಲಿನ ಆಸಕ್ತಿ ಮೂರ್ತಿರಾಯರ ಹಲವು ಪ್ರಬಂಧಗಳಿಗೆ ಹೊಸ ಆಯಾಮವನ್ನು ಕೊಡುತ್ತದೆ' ಎಂದು ಎಲ್.ಎಸ್.ಎಸ್. ಅಭಿಪ್ರಾಯ ಪಡುತ್ತಾರೆ.

ರಹಮತ್ ತರೀಕೆರೆ

ಡಾ. ರಹಮತ್ ತರೀಕೆರೆಯವರು ಮೂರ್ತಿರಾಯರ ಪ್ರಬಂಧಗಳು ಶ್ರೇಷ್ಠವಾಗಿರಲು ಎರಡು ಕಾರಣಗಳನ್ನು ವಿವರಿಸುತ್ತಾರೆ. ''ಮೊದಲನೆಯದಾಗಿ ಇಲ್ಲಿ ಪ್ರತಿಪಾದನೆಗೊಳ್ಳುವ ಮನುಷ್ಯ ಪ್ರೇಮದ ಬದುಕಿನ ಪ್ರೀತಿಯ ನೆಲೆಯಿಂದ ಉದ್ಭವಗೊಂಡ ಜೀವನ ದರ್ಶನ ಮತ್ತು ಎರಡನೆಯದಾಗಿ, ಕನ್ನಡದ ಅತ್ಯಂತ ಲಾಲಿತ್ಯಮಯವಾದ ಗದ್ಯದ ಅಪೂರ್ವ ಶೈಲಿ, ಅದರೊಳಗಿನ ರಸಿಕತೆ, ವಿನೋದ ಪರತೆ.''

'ಮೂರ್ತಿರಾಯರ ಪ್ರಬಂಧಗಳು ಇಂಗ್ಲಿಷಿನ ಅತಿ ಶ್ರೇಷ್ಠ ಪ್ರಬಂಧಗಳೆನ್ನಲಾದವುಗಳೊಂದಿಗೆ ನಿಲ್ಲಬಲ್ಲವು ಎಂದು ನಮಗನಿಸುವಾಗಲೂ ಗೋಲ್ಡ್‌ಸ್ಮಿತ್ ತೋರುವ ಸಮಕಾಲೀನವಾದ ಅನುಭವ ಮತ್ತು ಕಾಳಜಿಗಳು ಇಲ್ಲಿ ಕಡಿಮೆಯೇಕಿವೆ? ಸಮಷ್ಟಿಯ ಸಂಗತಿಗಳನ್ನು ಪರಿಭಾವಿಸುವಲ್ಲಿ ಉಕ್ಕಬಹುದಾದ ಸಹಾನುಭೂತಿ ಚಿಂತನೆಗಳು ನಮ್ಮ ಸಂದರ್ಭದಲ್ಲಿ ಯಾಕೆ ಕ್ಷೀಣವಾಗಿವೆ? ನಮ್ಮ ಸಾಮಾಜಿಕ ವ್ಯವಸ್ಥೆಯು ಮತ್ತೊಂದು ಜನವರ್ಗದ ಅನುಭವ - ನೋವುಗಳಿಗೆ ದುಡಿಯಲು ಅಡ್ಡಿಯಾಗುತ್ತದೆಯೇ?' ಎಂದು ಪ್ರಶ್ನಿಸುವ ತರೀಕೆರೆಯವರು

'ಮೂರ್ತಿರಾಯರ ಪ್ರಬಂಧಗಳ ಜಗತ್ತು ಶಿಷ್ಟವೂ, ನಗರವೂ, ಮಧ್ಯಮವರ್ಗದ್ದೂ ಆದುದು. ಕಾರಂತ, ಗೊರೂರು, ಕುವೆಂಪು ಅವರ ಅನುಭವ ಜಗತ್ತು ಜಾನಪದದಲ್ಲಿ ಬೇರು ಬಿಟ್ಟು ತಾನೇ ಒಂದು ಶಕ್ತಿಯಾಗಿದೆ. ಹೀಗಾಗಿ ಇಲ್ಲಿ ಬೆಸ್ತರ ಕರಿಯ, ಶಾಲುಸಾಬಿ, ಪಾಟಾಳಿ ರಾಮಯ್ಯರಂಥ ಸಮುದಾಯದಲ್ಲಿ ಚಲಾವಣೆಗೊಳ್ಳುವ ವ್ಯಕ್ತಿತ್ವಗಳು ಇಲ್ಲವಾಗಿವೆ. ಆದರೆ ವಿದ್ವತ್‌ಲೋಕದ ಸೀಮಿತ ನೆಲೆಯಲ್ಲಿ ಅರ್ಥವಂತಿಕೆಯನ್ನು ಪ್ರಕಟಿಸುವ ಇಲ್ಲಿನ ಟಿ.ಎಸ್. ವೆಂಕಣ್ಣಯ್ಯ ಮೊದಲಾದ ಸ್ಮೃತಿಚಿತ್ರಗಳಾದರೂ ಬದುಕಿನ ಪ್ರೀತಿ ತತ್ವವನ್ನು ಅನಂತರೂಪದಲ್ಲಿ ವ್ಯಕ್ತಮಾಡುವ ಕಾರಣಕ್ಕಾಗಿಯೇ ಬಂದಿವೆ'' ಎಂದು ವಿವರಿಸುತ್ತಾರೆ.

ಉಪಸಂಹಾರ

ಕನ್ನಡದ ಶ್ರೇಷ್ಠ ಪ್ರಬಂಧಕಾರರಾದ ಎ.ಎನ್. ಮೂರ್ತಿರಾಯರು ಮೂರು ಬಹು ಮುಖ್ಯ ಪ್ರಬಂಧ ಸಂಕಲನಗಳೊಂದಿಗೆ, ವಿಮರ್ಶೆ, ಅನುವಾದಗಳನ್ನೊಳಗೊಂಡಂತೆ ಕನ್ನಡದಲ್ಲಿ ಒಟ್ಟು ಇಪ್ಪತ್ತೊಂದು ಕೃತಿಗಳ ಕರ್ತೃವಾಗಿದ್ದಾರೆ. ಶಿವರಾಮಕಾರಂತರ ಮರಳಿ ಮಣ್ಣಿಗೆ ಕೃತಿಯನ್ನು ''The Returen to the soil'' ಎಂಬ ಹೆಸರಿನಿಂದ ಇಂಗ್ಲಿಷಿಗೆ ಭಾಷಾಂತರಿಸಿರುವುದಲ್ಲದೆ ಬಿ.ಎಂ. ಶ್ರೀಯವರ ಜೀವನ ಚರಿತ್ರೆಯೊಂದನ್ನು ಇಂಗ್ಲಿಷಿನಲ್ಲಿ ರಚಿಸಿದ್ದಾರೆ. ಇಷ್ಟಲ್ಲದೆ ಸಂಕಲನಗಳಲ್ಲಿ ಸೇರಿರದ ಕನ್ನಡದ ಲೇಖನಗಳು, ವಿಮರ್ಶೆಗೆ ಸಂಬಂಧಿಸಿದಂತೆ ಇಂಗ್ಲಿಷಿನ ಬಿಡಿ ಲೇಖನಗಳು ಹಲವಿವೆ. ನವೋದಯ ಕಾಲವು ಶ್ರೇಷ್ಠ ಕಾವ್ಯ, ಕಥನ ಪ್ರಕಾರಗಳೊಂದಿಗೆ ಪ್ರಬಂಧ ಪ್ರಕಾರದಲ್ಲೂ ಸಮೃದ್ಧವಾದುದಾಗಿದೆ. ಹಲವು ಕಾರಣಗಳಿಗಾಗಿ ಇತರ ಪ್ರಬಂಧಕಾರರಿಗಿಂತ ಭಿನ್ನವಾಗುವ ಮೂರ್ತಿರಾಯರು ಮುಖ್ಯವಾಗಿ ಪ್ರಬಂಧ ಪ್ರಕಾರವನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಆರಿಸಿಕೊಂಡುದು ಕುತೂಹಲಕರವಾದುದಾಗಿದೆ.

ಕೃತಿಯ ಆರಂಭದಲ್ಲಿ ಸ್ಪಷ್ಟಪಡಿಸಿರುವಂತೆ ಕೈಗಾರಿಕೀಕರಣದ ಜೊತೆಜೊತೆಗೆ ವಸ್ತುವೈವಿಧ್ಯ ಮತ್ತು ಬಾಹುಳ್ಯತೆಯನ್ನು ಪಡೆದ ಪಾಶ್ಚಾತ್ಯ ಪ್ರಬಂಧ ಪ್ರಕಾರವು ಆಧುನಿಕ ಜೀವನ ಕ್ರಮದೊಂದಿಗೆ ಸಾವಯವ ಸಂಬಂಧವನ್ನು ಪಡೆದುದಾಗಿತ್ತು. ಮೂರ್ತಿರಾಯರ ಯಶಸ್ಸು ಕೂಡ ಆಧುನಿಕ ಜೀವನ ಕ್ರಮವನ್ನು ಗ್ರಹಿಸುವ ಮತ್ತದನ್ನು ಹಳೆಯದರೊಂದಿಗೆ ಅರ್ಥಪೂರ್ಣ ಸಂಬಂಧವನ್ನು ಕಲ್ಪಿಸಿ ವರ್ತಮಾನದಲ್ಲಿ ವಿಸ್ತರಿಸಿಕೊಳ್ಳುವ ನೆಲೆಯನ್ನವಲಂಬಿಸಿದುದನ್ನು ಗಮನಿಸಬಹುದಾಗಿದೆ. ತತ್ಕಾಲೀನ ವೈರುಧ್ಯಗಳಿಗೆ ಸಿಡಿಯುವ ಗುಣ, ಆವೇಶ, ಅತಿರೇಕಗಳಿಲ್ಲದೆ ಶಾಂತ, ನಿರ್ಲಿಪ್ತ ಗುಣಗಳೊಂದಿಗೆ ಬದುಕಿನ ಎಲ್ಲಾ ವಿಕೃತಗಳನ್ನು ಮೀರಿ ಅರ್ಥಪೂರ್ಣ ಕ್ಷಣಗಳನ್ನು ಅನುಭವಿಸುವ, ಅರಸುವ ಮನೋಭಾವ ಮೂರ್ತಿರಾಯರ ವ್ಯಕ್ತಿತ್ವದೊಂದಿಗೆ ಅವರ ಕೃತಿಗಳಲ್ಲಿ ಕಂಡುಬರುವ ವಿಶಿಷ್ಟ ಗುಣವಾಗಿದೆ. ಇವರ ಬರವಣಿಗೆಯ ಹಿಂದಿನ ಅನುಭವ ಇಂಡಿಯಾದ ಸಾಮಾಜಿಕ ಅವಸ್ಥಾಂತರಗಳ ಘಟ್ಟದ ಒಂದು ನೆಲೆಯ ಅದರಲ್ಲೂ ಮೇಲುವರ್ಗದ ಜೀವನ ನೆಲೆಯಿಂದ ಹುಟ್ಟಿಕೊಂಡುದುದಾಗಿದೆ. ಇದೇ ಪರಿಮಿತಿಯು ಸಮಕಾಲೀನ ವೈರುಧ್ಯಗಳ, ಸಂಘರ್ಷಮಯ ವ್ಯವಸ್ಥೆಯು (ಉದಾ: ಸ್ವಾತಂತ್ರ್ಯಚಳುವಳಿ) ಗಾಢ ಪರಿಣಾಮಕ್ಕೊಳಗಾಗದಿರುವರಲ್ಲಿಯೂ ಕಂಡುಬರುತ್ತದೆ. ಇದನ್ನೆಲ್ಲ ಪ್ರಾಮಾಣಿಕವಾಗಿ ಒಪ್ಪಿಕೊಂಡು ಅಭಿವ್ಯಕ್ತಿಯ ನೆಲೆಗಳನ್ನು ಕಂಡುಕೊಂಡುದು ಅವರ ವೈಶಿಷ್ಟ್ಯವಾಗಿದೆ.

ಒಟ್ಟಾರೆ ಮೂರ್ತಿರಾಯರು ಕನ್ನಡದ ಶ್ರೇಷ್ಠ ಪ್ರಬಂಧಕಾರರಾಗಿದ್ದಾರೆ. ಕನ್ನಡದ ಗದ್ಯವನ್ನು ಹೊಸ ಆಲೋಚನೆಗಳ, ವಿಚಾರಗಳ ಅಭಿವ್ಯಕ್ತಿ ಮಾಧ್ಯಮವಾಗಷ್ಟೇ ಅಲ್ಲದೆ, ಒಂದು ಭಾಷೆಗಿರುವ ಲಾಲಿತ್ಯದ ಗುಣ, ಸ್ವಭಾವಗಳನ್ನು ಸಮರ್ಥವಾಗಿ ದುಡಿಸಿಕೊಂಡ ತಮ್ಮ ವಿಶಿಷ್ಟತೆಯಿಂದಾಗಿಯೇ ಪ್ರಬಂಧ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಾಗಿದ್ದಾರೆ.

ಅನುಬಂಧ-೧

ಎ.ಎನ್. ಮೂರ್ತಿರಾವ್ ಅವರ ಕೃತಿಗಳು

ಕನ್ನಡ ಪುಸ್ತಕಗಳು

೧. ಆಷಾಡಭೂತಿ - (ನಾಟಕ ಮೋಲಿಯೇರ್‌ನ 'ತಾರ್ತುಫ್' ನಾಟಕದ ರೂಪಾಂತರ)

೨. ಸಾಕ್ರೇಟೀಸ್‌ನ ಕೊನೆಯ ದಿನಗಳು (ಪ್ಲೇಟೋವಿನ 'Enthyphro', 'Crito', 'Apology', 'Phaedo' ಎಂಬ ಸಂವಾದಗಳ ಅನುವಾದ.)

೩. ಹಗಲುಗನಸುಗಳು (ಲಲಿತ ಪ್ರಬಂಧಗಳು) (೧೯೩೭), ಮೊದಲಮುದ್ರಣ

೪. ಹವಳದ ದ್ವೀಪ (ಆರ್.ಎಂ. ಬ್ಯಾಲಂಡೈನ್‌ನ 'The Coral Island' ನ ಸಂಗ್ರಹಾನುವಾದ)

೫. ಯೋಧನ ಪುನರಾಗಮನ (ಅನುವಾದಿತ ಸಣ್ಣಕತೆಗಳು)

೬. ಪಾಶ್ಚಾತ್ಯ ಸಣ್ಣ ಕಥೆಗಳು (ಅನುವಾದಿತ ಸಣ್ಣಕಥೆಗಳು)

೭. ಅಲೆಯುವ ಮನ (ಲಲಿತ ಪ್ರಬಂಧಗಳು) ೧೯೫೭ ಮೊದಲ ಮುದ್ರಣ

೮. ಷೇಕ್‌ಸ್ಪಿಯರ್, ಪೂರ್ವಭಾಗ, (ವಿಮರ್ಶೆ) ೧೯೬೨ ಪ್ರ. ಮು.

೯. ಅಮೆರಿಕನ್ ಸಾಹಿತ್ಯ (ಅನುವಾದಿತ ಸಾಹಿತ್ಯ ಚರಿತ್ರೆ)

೧೦. ಮೋಲಿಯೇರ್‌ನ ಎರಡು ನಾಟಕಗಳು (ಅನುವಾದ)

೧೧. ಮಾಸ್ತಿಯವರ ಕಥೆಗಳು (ವಿಮರ್ಶೆ) ೧೯೭೧ ಪ್ರ.ಮು.

೧೨. ಇಂಡಿಯ, ಇಂದು ಮತ್ತು ನಾಳೆ (ಜವಹಾರಲಾಲ್ ನೆಹ್ರು ಅವರ India, Today and Tomorrow ಎಂಬ ಪುಸ್ತಕದ ಅನುವಾದ)

೧೩. ಮಿನುಗು ಮಿಂಚು (ಲಲಿತ ಪ್ರಬಂಧಗಳು) ೧೯೬೨, ಮೊದಲ ಮುದ್ರಣ.

೧೪. ಚಿತ್ರಗಳು. ಪತ್ರಗಳು ೧೯೭೮, ಪ್ರ.ಮು.

೧೫. ಬಿ.ಎಂ. ಶ್ರೀಕಂಠಯ್ಯ (ವಿಮರ್ಶಾತ್ಮಕ ಜೀವನಚರಿತ್ರೆ.)

೧೬. ಪೂರ್ವಸೂರಿಗಳೊಡನೆ (ವಿಮರ್ಶೆ ೧೯೮೨, ಪ್ರಥಮ ಮುದ್ರಣ)

೧೭. ಚಂಡಮಾರುತ (ಷೇಕ್ಸ್‌ಪಿಯರ್‌ನ 'The Tempest' ನಾಟಕದ ಅನುವಾದ)

೧೮. ಅಪರವಯಸ್ಕನ ಅಮೇರಿಕಾಯಾತ್ರೆ (ಪ್ರವಾಸ ಕಥನ) ೧೯೭೪ ಪ್ರಥಮ ಮುದ್ರಣ

೧೯. ಸಾಹಿತ್ಯ ಮತ್ತು ಸತ್ಯ (ವಿಮರ್ಶೆ)

೨೦. ವಿಮರ್ಶಾತ್ಮಕ ಪ್ರಬಂಧಗಳು (ವಿಮರ್ಶೆ) ೧೯೮೨ ಪ್ರ.ಮು.

೨೧. ಸಂಜೆಗಣ್ಣಿನ ಹಿನ್ನೋಟ.

೨೨. ದೇವರು ಪ್ರ. ಮು. ೧೯೯೧

Books in English

1. The return to the soil, (Translation of Shivarama Karanth's 'Marali Mannige')
2. B.M. Srikantaiah (Biography and criticism)

ಪುಸ್ತಕಗಳಲ್ಲಿ ಸೇರಿಲ್ಲದ ಕನ್ನಡ ಮತ್ತು ಇಂಗ್ಲಿಷ್ ಬಿಡಿ ಲೇಖನಗಳು

೧. ಆಕಾಶವಾಣಿಗೆ ಮತ್ತು ದೂರದರ್ಶನಕ್ಕೆ ಆಡಳಿತ ಸ್ವಾತಂತ್ರ್ಯ

೨. ವಿದೇಶಗಳಲ್ಲಿ ನೆಲಸಿದ ಕನ್ನಡಿಗರು ಮತ್ತು ಕನ್ನಡ ಸಂಸ್ಕೃತಿ

೩. ಡಿ.ವಿ. ಗುಂಡಪ್ಪನವರು - ಪಾಂಡಿತ್ಯ, ವೈಚಾರಿಕತೆ ಮತ್ತು ವ್ಯಕ್ತಿತ್ವ

೪. ಡಿ.ವಿ. ಗುಂಡಪ್ಪನವರು - ಕೆಲವು ನೆನಪುಗಳು

೫. ಮಹಾಕಾವ್ಯಗಳನ್ನು ಕುರಿತು ನೆನಪುಗಳು

೬. ತೌಲನಿಕ ಕಾವ್ಯಮೀಮಾಂಸೆ

೭. ಸಂಗೀತ ಜ್ಞಾನಮು, ಅರ್ಥವಿನಾ

Articles in English

PERSONALITIES:

1. Radhakrishnan
2. Vishweshwaraiah
3. Masti Venkatesh Iyengar
4. B. S. Kesavan,

ESSAYS OF THE PERSONAL VARIETY

1. The living Room
2. Professional Stamp : The writer
3. The Common Room
4. Do it yourself and see I
5. What life has tought me
6. The name of the Beloved
7. Human Dignity
8. Constructive criticism
9. Hinduism
10. Bangalore

CRITICISM

1. Imagery in Kalidasa's 'Meghasandesa'
2. The dram at the Crossways
3. Shakespear in Kannada
4. Indianness in Indian Litrerature

ಅನುಬಂಧ - ೨

ಎ.ಎನ್. ಮೂರ್ತಿರಾವ್ - ಬದುಕಿನ ವಿವರಗಳು

೧. ಹುಟ್ಟಿದ ದಿನ ಮತ್ತು ಸ್ಥಳ

೧೬.೬.೧೯೦೦; ಅಕ್ಕಿಹೆಬ್ಬಾಳು - ಮಂಡ್ಯಜಿಲ್ಲೆ

೨. ಕೌಟುಂಬಿಕ ವಿವರಗಳು

ತಾಯಿ - ತಂದೆ: ಶ್ರೀಮತಿ ಪುಟ್ಟಮ್ಮ ಶ್ರೀ ಎ. ಸುಬ್ಬರಾವ್
ಹೆಂಡತಿ ಮತ್ತು ಮಕ್ಕಳು: ಶ್ರೀಮತಿ ಜಯಲಕ್ಷ್ಮಿ,
ಎ.ಎನ್. ಸುಬ್ಬರಾಮಯ್ಯ
ಎ.ಎನ್. ನಾಗರಾಜ್
ಎ.ಎನ್. ರಾಮಚಂದ್ರರಾವ್

೩. ವಿದ್ಯಾಭ್ಯಾಸ

ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲು
ಮೈಸೂರಿನ ಮಹಾರಾಜ ಕಾಲೇಜು; ಎಂ.ಎ. (ಇಂಗ್ಲಿಷ್ ಸಾಹಿತ್ಯ)

೪. ವೃತ್ತಿ

೧. ಮೈಸೂರಿನ ಮಹಾರಾಜ ಹೈಸ್ಕೂಲಿನಲ್ಲಿ ಉಪಾಧ್ಯಾಯ : ೧೯೨೫ - ೧೯೨೭

೨. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ೧೯೨೭ - ೪೦

೩. ಶಿವಮೊಗ್ಗ ಇಂಟರ್ಮೀಡಿಯೇಟ್ ಕಾಲೇಜಿನಲ್ಲಿ ಉಪ ಪ್ರಾಧ್ಯಾಪಕ : ೧೯೪೦ - ೧೯೪೩

೪. ಮೈಸೂರು ಆಕಾಶವಾಣಿ ರೇಡಿಯೋ ಸ್ಟೇಷನ್ನಿನ ನಿರ್ದೇಶಕ : ೧೯೪೩ - ೪೭

೫. ಚಿತ್ರದುರ್ಗ ಇಂಟರ್ಮೀಡಿಯೆಟ್ ಕಾಲೇಜಿನ ಪ್ರಿನ್ಸಿಪಲ್ : ೧೯೪೮ - ೪೯

೬. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕ : ೧೯೪೯-೧೯೫೫

೭. ನಿವೃತ್ತಿ : ೧೯೫೫

೮. ಕರ್ನಾಟಕ ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ನಿರ್ದೇಶಕ: ೧೯೫೬-೫೯

೫. ಗೌರವ ಕೆಲಸ

೧. ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು : ೧೯೫೪

೨. ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು : ೧೯೫೪-೫೬

೩. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಕನ್ವೀನರ್ ಚೇರ್ಮನ್

೪. ಸದರ್ನ್ ಲ್ಯಾಂಗ್ವೆಜಸ್ ಬುಕ್ ಟ್ರಸ್ಟ್‌ನ ಕನ್ನಡ ಕನ್ವೀನರ್ - ಚೇರ್ಮನ್

೫. ಆಲ್ ಇಂಡಿಯಾ ರೇಡಿಯೋವಿನ 'ಸೆಂಟ್ರಲ್ ಪ್ರೋಗ್ರಾಂ ಅಡ್ವೈಸರಿ ಕಮಿಟಿ'ಯ ಸದಸ್ಯ - ನಾಲ್ಕು ವರ್ಷಗಳ ಕಾಲ.

೬. ಗೌರವ

೧. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ :೧೯೭೪

೨. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿಲಿಟ್ ೧೯೭೭

೩. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ:
(ಅಪರವಯಸ್ಕನ ಅಮೇರಿಕಾ ಯಾತ್ರೆ) ೧೯೭೮

೪. 'ಚಿತ್ರಗಳು ಪತ್ರಗಳು' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ: ೧೯೭೯

೫. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ : ೧೯೮೧
(ಚಂಡ ಮಾರುತ)

೬. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ : ೧೯೮೪

೭. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ : ೧೯೮೪

೮. 'ದೇವರು' ಕೃತಿಗೆ ೯೨-೯೩ನೇ ಸಾಲಿನ ಪಂಪ ಪ್ರಶಸ್ತಿ

ಅನುಬಂಧ -೩

ಹೆಚ್ಚಿನ ಓದಿಗಾಗಿ

ಪುಸ್ತಕಗಳು

೧. 'ಪ್ರತಿಸಂಸ್ಕೃತಿ', ಲೇ: ಡಾ. ರಹಮತ್ ತರೀಕೆರೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್ ಬೆಂಗಳೂರು ೧೯೯೩

೨. ಎ.ಎನ್. ಮೂರ್ತಿರಾವ್ : ಲೇ. ಮಳಲಿ ವಸಂತಕುಮಾರ್, ಜನಮಿತ್ರ ಪ್ರಕಾಶನ, ಹಾಸನ, ೧೯೮೪

ಲೇಖನಗಳು

೧. 'ನಗೆಯ ನೆರಳಲ್ಲಿ ಸತ್ಯ' (ಲೇಖಕ, ಕೃತಿ, ಸಂದರ್ಭ) ಎ.ಎನ್. ಮೂರ್ತಿರಾವ್, ಸಂದರ್ಶನ ಲೇಖನ, ಡಾ. ವಿಜಯಾ ಸುಬ್ಬರಾಜ್, ಪ್ರಜಾವಾಣಿ ದೀಪಾವಳಿ ವಿಶೇಷಾಂಕ, ೧೯೯೩

೨. 'ಅಪರೂಪದ ವ್ಯಕ್ತಿ, ಪ್ರೊ. ಎ.ಎನ್. ಮೂರ್ತಿರಾಯರು' ಡಾ. ಪ್ರಭುಶಂಕರ, ಪ್ರಬುದ್ಧ ಕರ್ನಾಟಕ, ಸಂಪುಟ ೬೬, ಸಂಚಿಕೆ -೧.

೩. 'ಪುಸ್ತಕ ಮಾಹಿತಿ' ಸಂ. ಓ. ಎಲ್. ನಾಗಭೂಷಣಸ್ವಾಮಿ, ಮೇ. ೧೯೯೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಮರಣ ಸಂಚಿಕೆ

'ಕೈವಾರದ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ- ೧೯೮೪

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟುಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು